ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

(1) ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣಾ ಸಂದರ್ಭದಲ್ಲಿ ನಡೆದ ಗೋಲಿಬಾರ್ ಪ್ರಕರಣದ ಬಗ್ಗೆ ತನಿಖೆ ನಡೆಸಲು ರಚಿಸಲಾದ ಜಂಟಿ ಸದನ ಸಮಿತಿಯ ವರದಿ.

(2) 1994-95ನೇ ಸಾಲಿನ ಕಂದಾಯ, ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆಯ ಮೇಲಿನ ವಿಷಯ ಸಮಿತಿಯ ಎರಡನೆಯ ವರದಿ.

(3) ವಾರ್ತಾ ಮತ್ತು ಪ್ರಚಾರ, ಯುವಜನ ಸೇವೆ, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವಿಷಯ ಸಮಿತಿಯ 2ನೇ ವರದಿ.

i) ರಾಷ್ಟ್ರೀಯ ಕ್ರೀಡೆಗಾಗಿ ಕೋರಮಂಗಲದ ಬಳಿ ಕ್ರೀಡಾ ಸಮುಚ್ಚಯ ನಿರ್ಮಿಸಲು ಕರೆಯಲಾದ ಟೆಂಡರ್‌ನಲ್ಲಿ ಅವ್ಯವಹಾರ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ ಇಂದು ಬೆಳಿಗ್ಗೆ 8-50ಕ್ಕೆ ನಾನು ನಿಮ್ಮ ಸೆಕ್ರೆಟರಿ ಕಚೇರಿಯ ಹತ್ತಿರ ಕಾದು ನಿಂತಿದ್ದೆನು. ಅತ್ಯಂತ ಮಹತ್ವದ ವಿಚಾರದ ಬಗ್ಗೆ ಈ ಸ್ಥಾನದಲ್ಲಿ ನಿಂತು ನಾನು ಪ್ರಸ್ತಾಪ ಮಾಡದಿದ್ದರೆ ನನ್ನ ಕರ್ತವ್ಯ ಚ್ಯುತಿಯಾಗಬಹುದು ಎನ್ನುವ ದೃಷ್ಟಿಯಿಂದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇವೊತ್ತು ರಾಷ್ಟ್ರೀಯ ಕ್ರೀಡೆಗಾಗಿ ನಗರದ ಕೋರಮಂಗಲಕ್ಕ ಬಳಿ ಸುಮಾರು 250 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕ್ರೀಡಾ ಸಮುಚ್ಚಯವನ್ನು ನಿರ್ಮಿಸಲು ಕರೆಯಲಾದ ಒಂದು ಟೆಂಡರ್‌ನಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ಆಡಳಿತ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ನಡೆದ ವಿಚಾರವು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಗೆ ಮುನ್ನ ಒಂದು ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಚುನಾವಣೆ ನಡೆಸುವ ವೇಳಾಪಟ್ಟಿ ಪ್ರಕಟವಾದ ಮೇಲೆ ತರಾತುರಿಯಲ್ಲಿ ಅವೊತ್ತು ಇದ್ದಂಥ ಸರಕಾರ ಕೆಲವು ಕಾಮಗಾರಿಗಳನ್ನು ಕೊಟ್ಟಿದ್ದಾರೆ, ಟೆಂಡರ್ ಕರೆಯಬೇಕಾದಂಥ ಮತ್ತು ಇತರ ಫಾಲೋ ಮಾಡಬೇಕಾದಂಥ ಪ್ರೊಸೀಜರ್‌ಗಳನ್ನು ಮಾಡಿಲ್ಲ, ಭಾರಿ ಅವ್ಯವಹಾರ ನಡೆಯುವ ಸಂಶಯ ಇದೆ ಎಂದು ಒತ್ತಾಯ ಮಾಡಿದ್ದರು. ಕೋಟಿಗಟ್ಟಲೆ ಬೆಲೆಬಾಳುವ ಒಂದು ಕಾಮಗಾರಿಯನ್ನು ರದ್ದು ಮಾಡುವ ಬಗ್ಗೆ ಅವರ ಮಾತಿನಿಂದ ರದ್ದು ಮಾಡಿದ ಬಗ್ಗೆ ಕೂಡ ಪತ್ರಿಕೆಯಲ್ಲಿ ಬಂದಿದೆ. ಈ ಬಗ್ಗೆ ಕರೆದಿರುವಂಥ ಟೆಂಡರ್ ಏನಿದೆ ಅದರ ಬಗ್ಗೆ ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು ಏನು ಎನ್ನುವ ಬಗ್ಗೆ ಕೆಲವು ವಿಚಾರಗಳನ್ನು ಕೇಳಲು ಇಚ್ಚಿಸುತ್ತೇನೆ. ಯಾವಾಗ ಈ ಟೆಂಡರ್‌ನ್ನು ಕರೆಯಲಾಯಿತು, ಎಷ್ಟು ಜನರು ಅದಕ್ಕೆ ಅರ್ಜಿಗಳನ್ನು ಹಾಕಿದ್ದರು ಇವರಲ್ಲಿ ಎಷ್ಟು ಜನರಿಗೆ ಅರ್ಹತೆ ಇದೆ ಎಂಬ ವಿಚಾರವನ್ನು ಕೇಳಲಿಚ್ಚಿಸುತ್ತೇನೆ.

ಯಾವ ಹೌಸಿಂಗ್ ಬೋರ್ಡಿನಲ್ಲಿ ಆಶ್ರಯ ಯೋಜನೆಯಲ್ಲಿ ಅವ್ಯವಹಾರ ನಡೆದು ಗುತ್ತಿಗೆಯವರಿಗೆ ಅಡ್ವಾನ್ಸ್ ಕೊಟ್ಟು ದುಡ್ಡನ್ನೇ ಮುಳುಗಿಸಿ ಬಡವರ ಮನೆ ಕಟ್ಟದೇ ಇರತಕ್ಕ ಒಂದು ಗುರುತರ ಆರೋಪಕ್ಕೆ ತುತ್ತಾಗಿತ್ತೋ ಆ ಇಲಾಖೆ ಮೂಲಕ ಟೆಂಡರ್ ಕರೆಸಿರುವುದು ಬಹಳ ಮಹತ್ವದ ಸಂಗತಿ ಇಲ್ಲಿ. ಅದಕ್ಕಾಗಿ ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಚಿಪಡುತ್ತೇನೆ. ಟೆಂಡರ್‌ನ್ನು ಯಾವ ಇಲಾಖೆಯಿಂದ ಕರೆಯಲಾಗಿತ್ತು? ಇದಕ್ಕಾಗಿ ಏನಾದರೂ ಒಂದು ಸಮಿತಿ ಇತ್ತಾ? ಆ ಸಮಿತಿಯಲ್ಲಿ ಅಧಿಕಾರಿಗಳು ಯಾರಿದ್ದರು? ನನಗೆ ಗೊತ್ತಿರುವ ಪ್ರಕಾರ ಪಿಡಬ್ಲ್ಯುಡಿ ಸೆಕ್ರೆಟರಿ ಇದ್ದರು, ಇತರ ಉನ್ನತ ಅಧಿಕಾರಿಗಳು ಇರಲಿಲ್ಲ, ಹೌಸಿಂಗ್ ಬೋರ್ಡಿನ ಇತರ

ಪ್ರಮುಖ ಸದಸ್ಯರು ಆ ಸಮಿತಿಯಲ್ಲಿದ್ದುದು ಅತ್ಯಂತ ಮಹತ್ತರವಾದ ವಿಷಯ. ಈ ಲೋಕೋಪಯೋಗಿ ಇಲಾಖೆ ಒಂದು ಕೋಡ್ ಏನು ಪಾಲಿಸಬೇಕಾಗಿತ್ತು ಟೆಂಡರ್‌ನ್ನು ಅಕ್ಸೆಪ್ಟ್ ಮಾಡುವಾಗ ಆ ನಿಯಮಾವಳಿಗಳನ್ನು ಪಾಲನೆ ಮಾಡಿದ್ದಿರಾ? ಈ ಸಮುಚ್ಚಯ ನಿರ್ಮಿಸುತ್ತಿರುವ ಜಾಗ ಯಾರದ್ದು? ಸರ್ಕಾರದ್ದೇ, ಖಾಸಗಿಯವರದ್ದೇ? ಲೋಕೋಪಯೋಗಿ ಇಲಾಖೆಯನ್ನು ಬಿಟ್ಟು ಹೌಸಿಂಗ್ ಬೋರ್ಡ್ ಮೂಲಕ ಈ ಟೆಂಡರ್‌ನ್ನು ಕರೆಯಲು ಕಾರಣವೇನು? ಮತ್ತೆ ನೋವು ತಂದಿರುವ ಮತ್ತೊಂದು ಸಂಗತಿ ಎಂದರೆ ಇವತ್ತು ಪತ್ರಿಕೆಯಲ್ಲಿ ಇದು ಬರಬಾರದಾಗಿತ್ತು.

ಒಂದು ಉನ್ನತ ಸಾಧನದಲ್ಲಿರುವಂತಹ ಈ ದೇಶದ ಪ್ರಧಾನಿಯವರ ಹೆಸರು ಎಳೆದು ತಂದಿರುವುದು, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಪ್ರಧಾನಿಯವರ ಸಂಬಂಧಿಕರಿಗೆ ಈ ಟೆಂಡರ್ ಕೊಟ್ಟಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿರುವುದು ಬಹುಶಃ ಈ ದೇಶದ ಜನರನ್ನೇ ಸಂಶಯದಲ್ಲಿ ಸಿಕ್ಕಿಸುವಂತಹ ಒಂದು ಸಂಗತಿ ಇದು. ಏಕೆ ಇದು ಹೆಚ್ಚು ಮಹತ್ವ ಪಡೆದಿದೆ ಎಂದರೆ ಅತ್ಯಂತ ಉನ್ನತ ವ್ಯಕ್ತಿಗಳ ಹೆಸರನ್ನು ಪ್ರಸ್ತಾಪ ಮಾಡಿರುವ ಈ ಸಂದರ್ಭದಲ್ಲಿ ಈ ಸತ್ಯಾಸತ್ಯತೆಗಳ ಅರಿವು ಕನ್ನಡನಾಡಿನ 5 ಕೋಟಿ ಜನರಿಗೆ, ಈ ದೇಶದ ಜನರಿಗೆ ಗೊತ್ತಾಗಬೇಕಾಗಿದೆ. ಅದಕ್ಕಾಗಿ ಈ ಟೆಂಡರ್ ಅಕ್ಸೆಪ್ಟ್ ಆಗಿರುವುದು, ಪ್ರಧಾನಿ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಹೆಸರನ್ನು ನಾವೇನು ತಂದಿದ್ದೇವೆ ಅವರ ಸಂಬಂಧಿಕರಿಗೆ ಗುತ್ತಿಗೆಯನ್ನು ಕೊಟ್ಟಿರುವುದು ನಿಜವೇ? ಆ ಹೆಸರುಗಳು ಪ್ರಸ್ತಾಪವಾಗಲು ಕಾರಣವೇನು? ಮತ್ತೆ ಬಹಳ ಪ್ರಮುಖವಾಗಿ ಯಾವ ಹೌಸಿಂಗ್ ಬೋರ್ಡಿನ ಬಗ್ಗೆ ಈ ನಾಡಿನ ಜನ ಬೇಸತ್ತಿದ್ದಾರೋ, ಸಂಶಯ ವ್ಯಕ್ತಪಡಿಸಿದ್ದಾರೋ, ಆಶ್ರಯ ಯೋಜನೆಯಲ್ಲಿ ಮನೆ ಕಟ್ಟುವುದಕ್ಕೆ 25-30 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ ಹಣವನ್ನು ಸನ್ಮಾನ್ಯ ಅಧ್ಯಕ್ಷರೇ ನಿಮಗೆ ಆಶ್ಚರ್ಯವೆಂದರೆ ಯಾವುದೇ ಗ್ಯಾರಂಟಿ ತೆಗೆದುಕೊಳ್ಳದೆ ಬೇನಾಮಿ ಹೆಸರಿನಲ್ಲಿ ಹಣವನ್ನು ಬಿಡುಗಡೆ ಮಾಡಿ ಈ ನಿಮಿಷದವರೆಗೆ ಒಂದು ಮನೆಯನ್ನು ಕಟ್ಟದೇ 25-30 ಕೋಟಿ ಮುಳುಗಿಸಿದ ಆ ಹೌಸಿಂಗ್ ಬೋರ್ಡನ್ನೇ ಆಯ್ಕೆ ಮಾಡಿಕೊಳ್ಳುವುದಕ್ಕೆ ಕಾರಣವೇನು? ಈ ಟೆಂಡರ್‌ನ್ನು ಕೊಟ್ಟ ದಿನಾಂಕ ಯಾವುದು? ಅದು ಚುನಾವಣೆ ಮುನ್ನಾ ಇರಬಹುದು ಆಮೇಲಿರಬಹುದು, ಅದು ಬೇರೆ ವಿಷಯ. ನನಗನ್ನಿಸುತ್ತದೆ, ವಿವರವನ್ನು ಸರ್ಕಾರ ಕೊಟ್ಟಮೇಲೆ ಕೇಳಲು ಇಚ್ಛಿಪಡುತ್ತೇನೆ. 250 ಕೋಟಿ ರೂ.ಗಳ ಒಟ್ಟು ಎಸ್ಟಿಮೇಟಿನಲ್ಲಿ ಸುಮಾರು 40ರಿಂದ 50ಕೋಟಿ ಎಸ್ಟಿಮೇಟ್ ಮಾಡುವಂತಹ ಸಂದರ್ಭದಲ್ಲಿ ಜಾಸ್ತಿ ಮಾಡಿದ್ದಾರೆ. ಅದಕ್ಕೆ ನಾನು ಒತ್ತಾಯ ಮಾಡುತ್ತಿರುವುದು ಈ 250 ಕೋಟಿ ಟೆಂಡರ್ ಕರೆದಿರುವುದರ ಬಗ್ಗೆ ಹೊಸದಾಗಿ ಟೆಂಡರ್ ಕರೆಯಬೇಕು. ಈಗ ಯಾವ ಅಧಿಕಾರಿಗಳು ಶಾಮೀಲಾಗಿ ಅತ್ಯಂತ ಉನ್ನತ ಪ್ರಭಾವ ಇರುವ ಸಂಬಂಧಿಕರಿಗೆ ಈ ಟೆಂಡರ್‌ನ್ನು ಒಪ್ಪಿಗೆ ಕೊಟ್ಟಿದ್ದೀರೋ, ಅದು ಕೂಡ ಹೊರ ರಾಜ್ಯದವರಿಗೆ ಕೊಟ್ಟಿದ್ದೀರಿ ಎಂದು ನಮಗೆ ಸಂಶಯ ಬಂದಿದೆ- ಈ ಎಲ್ಲಾ ವಿವರವನ್ನು ಅವರು ಒದಗಿಸಬೇಕೆಂದು ಹೇಳುತ್ತಾ, ಅದಕ್ಕಿಂತ ಬಹಳ ಮುಖ್ಯವಾದದ್ದು ಚುನಾವಣೆ ದಿನಾಂಕ ಘೋಷಣೆಯಾದ ಮೇಲೆ ಪಿಡಬ್ಲ್ಯುಡಿ ಇರಬಹುದು ಇರಿಗೇಷನ್ ಇರಬಹುದು ಯಾರ್ಯಾರಿಗೆ ಕಾಮಗಾರಿಗಳನ್ನು ಒದಗಿಸಿಕೊಟ್ಟಿದ್ದೀರಿ ಆ ಎಲ್ಲಾ ವಿವರಗಳನ್ನು ಕೊಡಬೇಕು.

ಒಂದು ಬಹಳ ಪ್ರಮುಖವಾದ ಸಂಗತಿ ಅಧ್ಯಕ್ಷರೇ, ತುಮಕೂರಿನಲ್ಲೊಬ್ಬ ಚೀಫ್ ಇಂಜಿನಿಯರ್ ಇದ್ದಾರೆ, ಹೇಮಾವತಿ ಜೋನ್, ಭದ್ರಾ ಜೋನ್ ತುಮಕೂರು ಜೋನ್ ಮೂರೂ ಜೋನ್‌ಗಳಿಗೆ ಸಂಬಂಧಿಸಿದಂತೆ ಒಬ್ಬರೇ ಚೀಫ್ ಇಂಜಿನಿಯರ್. ಅವರು ಪ್ರತಿ ತಿಂಗಳು ಎರಡರಿಂದ ಮೂರು ಕೋಟಿ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿ ಕೊಂಡು ಬಂದರು. ನನ್ನ ಹತ್ತಿರ ವಿವರ ಇದೆ. ಚುನಾವಣೆ ಸಂದರ್ಭದಲ್ಲೇ

30ರಿಂದ 40 ಕೋಟಿ ರೂ. ಒಂದು ತಿಂಗಳಲ್ಲೇ ಎಸ್ಟಿಮೇಟ್ಸ್ ಸ್ಕ್ಯಾಂಕ್ಷನ್ ಮಾಡಿ ಕೇರಳ ರಾಜ್ಯದವರಿಗೆ ಕೊಟ್ಟರು ಎಂಬುದು ನನ್ನ ಗಮನಕ್ಕೆ ಬಂದಿದೆ. ಒಬ್ಬ ಚೀಫ್ ಇಂಜಿನಿಯರ್ ಈ ಮೂರೂ ಜೋನನ್ನು ನೋಡಿಕೊಳ್ಳುವಂತಹ ಅಗತ್ಯ ಏನಿತ್ತು? ಪ್ರತಿ ತಿಂಗಳೂ ಕಾನೂನು ಬಾಹಿರವಾಗಿ ಎರಡು ಮೂರು ಕೋಟಿ ರೂಪಾಯಿಗಳನ್ನು ಹೇಗೆ ಸ್ಯಾಂಕ್ಷನ್ ಮಾಡಿದರು? ಚುನಾವಣೆ ಸಮಯದಲ್ಲಿ ಪೀಸ್‌ವರ್ಕ್ ಮೇಲೆ ಕೊಡುವುದಕ್ಕೆ ಅವರಿಗೆ ಅಧಿಕಾರ ಯಾರು ಕೊಟ್ಟರು?

ಅಂತಹ ವ್ಯಕ್ತಿಗಳಿಗೆ ಸನ್ಮಾನ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ರಾಜ್ಯದ ಜನರಲ್ಲಿ ಲೋಕೋಪಯೋಗಿ ಇಲಾಖೆ ಇರಿಗೇಷನ್ ಇಲಾಖೆಯ ಬಗ್ಗೆ ಅಸಮಾಧಾನ ಬಂದಿದೆ ಕಾಮಗಾರಿ ಕೆಲಸವನ್ನು ಇಲ್ಲಿ ವಹಿಸಿಕೊಟ್ಟಿದ್ದೀರಿ ಇಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆಂಬ ಸಂಶಯ ಜನರಲ್ಲಿ ಮೂಡುತ್ತಿದೆ. ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಇದೆ. ಇದರಲ್ಲಿ ಅವ್ಯವಹಾರ ಕಂಡು ಬಂದರೆ ರದ್ದು ಮಾಡುತ್ತೇವೆಂದು ಈಗಾಗಲೇ ಅವರು ಹೇಳಿದ್ದಾರೆ. ಚುನಾವಣಾ ನಂತರ ಯಾವ್ಯಾವ ಕೆಲಸಗಳನ್ನು ಕೊಟ್ಟಿದ್ದಾರೋ ಎಲ್ಲವನ್ನೂ ರದ್ದು ಮಾಡಬೇಕು. ಈ ವಿಷಯದ ಬಗ್ಗೆ ಪ್ರಧಾನಿಯವರ ಅಥವಾ ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಸಂಬಂಧಿಗಳಿಗೆ ಟೆಂಡರ್ ಕೊಟ್ಟಿರುವುದು ನಿಜವೋ ಅಲ್ಲವೋ ಎಂಬುದನ್ನು ತಿಳಿಸಬೇಕು. ಮತ್ತೆ ಇದೆಲ್ಲವನ್ನೂ ಹೊಸದಾಗಿ ಎಸ್ಟಿಮೇಟ್ ಮಾಡಿ ಈ ಎಲ್ಲಾ ವಿವರವನ್ನು ಸಭಾ ನಾಯಕರು ಕೊಡಬೇಕೆಂದು ಸಾರ್ವಜನಿಕ ಮಹತ್ವದ ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಯವರೇ, ಅಧ್ಯಕ್ಷತೆ ವಹಿಸುತ್ತಾರೆಂದು ಪತ್ರಿಕೆಯಲ್ಲಿ ಬಂದಿದೆ ಅದು ನಿಜವೋ ಅಲ್ಲವೋ?

ಶ್ರೀ ಹೆಚ್.ಡಿ. ದೇವೇಗೌಡ : ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ನಾನು ಮೊದಲೇ ಹೇಳಿದ್ದೇನೆ. ಯಾವುದೇ ವಿಷಯದಲ್ಲಿ ನಾನು ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕಾರ್ಯಕ್ರಮ ಮಾಡುವುದಿಲ್ಲವೆಂದು ಹೇಳಿದ್ದೇನೆ. ಯಾವುದೇ ಪಕ್ಷದವರು ಇರಲಿ ಯಾವುದೇ ಭಾಗದಿಂದ ಸಂಶಯ ಬಂದರೆ ನೀವು ಆ ಕಡತ ಇಡಬೇಕೆಂದರೆ ಇಡುತ್ತೇನೆ ಎಂದು ಹೇಳಿದ್ದೇನೆ. ಈ ಸಂದರ್ಭದಲ್ಲಿ ನಿಮ್ಮನ್ನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಪತ್ರಿಕೆಯಲ್ಲಿ ಬರುವ ಸುದ್ದಿಗಳ ಮೇಲೆ ಈ ಸಭೆಯಲ್ಲಿ ಇಲ್ಲದಿರುವವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ. ನಾನೂ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಪತ್ರಿಕೆಯಲ್ಲಿ ಒಂದು ವಿಷಯ ಬಂದರೆ ಅದರ ಬಗ್ಗೆ ಸಾಕಷ್ಟು ಮಾಹಿತಿ ನಾನೇ ಸಂಗ್ರಹಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಸರಕಾರಿ ದಾಖಲೆಗಳನ್ನು ಹೇಗೆ ಒದಗಿಸಿಕೊಳ್ಳಬೇಕೆಂಬ ಪ್ರಯತ್ನ ಮಾಡಿ ದಾಖಲೆಗಳ ಸಮೇತ ವಿಷಯವನ್ನು ಇಲ್ಲಿ ಇಟ್ಟು ಚರ್ಚೆ ಮಾಡಿದ್ದೇನೆ. ನಿನ್ನೆ ಪತ್ರಿಕೆಯಲ್ಲಿ ಬಂದಿದೆ. ನಮ್ಮ ಪಕ್ಷದ ಸಭೆಯಲ್ಲಿ ಏನೋ ಮಾತಾಯಿತು ಎಂದು ಬಂದಿದೆ. ಪ್ರಧಾನ ಮಂತ್ರಿಗಳ ಸಂಬಂಧಿಕರು ಎಂದು ಯಾರು ಹೇಳಿದ್ದಾರೆ? ನಾನು ಯಾವ ಪಾರ್ಟಿ ಅಲ್ಲ. ಈ ಸಭೆಯನ್ನು ನಡೆಸುವಾಗ ಅನಾವಶ್ಯಕವಾಗಿ ಯಾವುದೋ ಸುದ್ದಿ ಪತ್ರಿಕೆಯಲ್ಲಿ ಬಂದರೆ, ಅದು ಕೆಲವು ಓದುಗರಿಗೆ ಚೆನ್ನಾಗಿರುತ್ತದೆ. I am very sorry, even media also has to restrain itself on such vital matters.

ಶರದ್‌ಪವಾರ್‌ಗೆ ಏನು ಸಂಬಂಧ ಇದೆ, ಇದರಲ್ಲಿ? Why anybody's name is to be brought herein? ನೀವು ಕೇಳುವುದಾದರೆ ಹೇಳಿ ಇಲ್ಲಿ, ಹೌಸಿಂಗ್ ಬೋರ್ಡಿನಲ್ಲಿ ಏನು ಪ್ರೊಸೀಡಿಂಗ್ಸ್ ಮಾಡಿದ್ದಾರೆ ಅದರ ರೆಸಲ್ಯೂಷನ್ ತರಿಸಿಕೊಳ್ಳಿ.

It is a not a secret document. Even if anything has happened you get a copy of the document.

ವಿರೋಧ ಪಕ್ಷದ ನಾಯಕರೇ ನೀವೇ ಹೋಗಿ ಇಂತಹ ಪ್ರೊಸೀಡಿಂಗ್ಸ್ ಆಗಿದೆಯೇ ಎಂದು ತೆಗೆದುಕೊಳ್ಳಿ ಸಭೆಯ ಮುಂದೆ ಅದರ ಎಕ್ಸ್‌ಟ್ರಾಕ್ಟ್ ತಂದು ಚರ್ಚೆ ಮಾಡಿ. ನಾನು ವೆಲ್‌ಕಂ ಮಾಡುತ್ತೇನೆ. ಆದರೆ ಎಲ್ಲಾ ವಿಷಯಕ್ಕೂ ಇಲ್ಲಿ ರಾಜಕಾರಣ ಮಾಡಲಿಕ್ಕೆ ನಾನು ಸಿದ್ದನಿಲ್ಲ. ಶರದ್‌ಪವಾರ್‌ಗೂ ಯಾವುದೇ ಪಕ್ಷಕ್ಕೂ ನನಗೇನೂ ಸಂಬಂಧವಿಲ್ಲ. ಈ ಸಭೆಯಲ್ಲಿ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಅದಕ್ಕೆ ಸರಿಯಾದ ದಾಖಲಾತಿ ಇಟ್ಟುಕೊಳ್ಳಬೇಕಾಗುತ್ತದೆ. ನೀವು ನಿನ್ನೆ ಮಾತನಾಡುತ್ತಾ ವಾಚ್ ಡಾಗ್ ಎಂದು ಹೇಳಿದಿರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ವಿಷಯದಲ್ಲಿ ಯಾವ ಟೆಂಡರ್ ಯಾರಿಗೂ ಕೊಟ್ಟಿಲ್ಲ. ಟೆಂಡರ್ ಕೂಡ ಓಪನ್ ಮಾಡಿಲ್ಲ. ಟೆಂಡರ್ ರಿಸೀವ್ ಮಾಡಲಿಕ್ಕೆ 26ನೇ ತಾರೀಖು ಕೊನೇ ತಾರೀಖು. ಅದರಲ್ಲಿ ಯಾರಿದ್ದಾರೆ, ಅವರ ಪೂರ್ವಾಪರ ಏನು ಅದರಲ್ಲಿ ಯಾರು ಪಾರ್ಟನರ್ಸ್ ಇದ್ದಾರೆ ಎಂಬುದರ ಬಗ್ಗೆ ನನಗೆ ಏನೇನೂ ಗೊತ್ತಿಲ್ಲ. ಆದರೆ ನನ್ನ ಮುಂದೆ ಒಂದು ದೂರು ಬಂತು. ಟೆಂಡರ್ ರಿಸೀವ್ ಮಾಡಲಿಕ್ಕೆ ಕೇಂದ್ರ ಸರಕಾರದ ಅಂಡರ್‌ಟೇಕಿಂಗ್ ಕಂಪನಿಯವರು ತೆಗೆದುಕೊಂಡು ಹೋದಾಗ ಅಲ್ಲಿ 2 ನಿಮಿಷ ತಡವಾಯಿತು ರಿಸೀವ್ ಮಾಡುವುದಿಲ್ಲವೆಂದು ಹೇಳಿದರಂತೆ. technically speaking he is correct. 3 ಗಂಟೆಯೊಳಗೆ ಬಂದರೆ ಮಾತ್ರ ನಾವು ರಿಸೀವ್ ಮಾಡುತ್ತೇವೆಂದು ನೋಟಿಸೈ ಮಾಡಿದ್ದಾರೆ according to that, speaking, the officer is correct. ಅಧಿಕಾರಿ ಆಫೀಸಿನಲ್ಲಿ ತನ್ನ ಒಂದು ವಿವೇಕವನ್ನು ಬಳಕೆ ಮಾಡಬೇಕಾಗುತ್ತದೆ. ಕೇಂದ್ರ ಸರಕಾರದ ಅಂಡರ್‌ಟೇಕಿಂಗ್‌ಗೆ ಟ್ರಾಫಿಕ್ ಜಾಮ್ ಆಯಿತು ಎಂದು ಹೇಳುತ್ತಾರೆ ಇದರಿಂದ 2 ನಿಮಿಷ ತಡವಾಯಿತೆಂದು ಹೇಳುತ್ತಾರೆ. ನಾನು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಿದ್ದೇನೆ. ಆ ಟೆಂಡರ್ ರಿಸೀವ್ ಮಾಡಿ 2 ನಿಮಿಷ ತಡವಾಗಿ ಬಂದಿದೆ ಎಂದು ನೀವು ಬರೆದುಕೊಳ್ಳಬೇಕಾಗಿತ್ತು. ಟೆಂಡರ್ ಒಡೆದ ಮೇಲೆ ಆ ಟೆಂಡರಿನಿಂದ ಸರಕಾರಕ್ಕೆ 1-2 ಕೋಟಿ ಉಳಿಯುವಂತಹ ಸಂದರ್ಭ ಇದ್ದರೆ, ಅದು ಲೋಯೆಸ್ಟ್ ಇದ್ದರೆ ಸರಕಾರದ ಅನುಮತಿ ತೆಗೆದುಕೊಂಡು ಸರಕಾರಕ್ಕೆ 1-2 ಕೋಟಿ ಉಳಿಸುವಂತಹ ಜವಾಬ್ದಾರಿ ನಿಮ್ಮದು ಇತ್ತು.

ಏತಕ್ಕೆ ನೀನು ತಿರಸ್ಕಾರ ಮಾಡಿದೆ? ಏತಕ್ಕೆ ನೀನು ರಿಸೀವ್ ಮಾಡಲಿಲ್ಲ ಎಂದು ನಾನು ಹೇಳಿದ ಮೇಲೆ he also received the tender ಎರಡು ನಿಮಿಷ ಲೇಟ್ ಎನ್ನುವ ಒಂದು ಕಾರಣಕ್ಕಾಗಿ ರಿಸೀವ್ ಮಾಡಿರಲಿಲ್ಲ. ಅಷ್ಟು ಬಿಟ್ಟು ಬಾಕಿ ಇನ್ನೇನೂ ಇಲ್ಲ. still tenders have not been opened. ಯಾರು ಇದ್ದಾರೋ, ಪ್ರಧಾನಮಂತ್ರಿಗಳು ಇದ್ದಾರೆ, ಆ ರೀತಿ ಹೇಳುವ ಅವಶ್ಯಕತೆ ಇಲ್ಲ. ಸದನದ ಸದಸ್ಯರಲ್ಲದವರ ಹೆಸರುಗಳನ್ನು ಇಲ್ಲಿ ಹೇಳಬಾರದು. ನಾಳೆ ಯಾವ ಪಕ್ಷದ ನಾಯಕರು ಬೇಕಾದರೂ ಇದನ್ನು ತಂದು ಚರ್ಚೆ ಮಾಡಬಹುದು. ದಯಮಾಡಿ ಇದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಒಂದು ನಿಮಿಷ ಯೀಲ್ಡ್ ಆಗುತ್ತೀರಾ?

(ಗೊಂದಲ)

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈ ದೇಶದ ಪ್ರಧಾನಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಈ ಸದನದ ಸದಸ್ಯರಲ್ಲ.

ಅವರ ಬಗ್ಗೆ ನಾವು ಏನೇ ಮಾತನಾಡಬೇಕಾದರೂ ಅದರಲ್ಲಿ ವಿರೋಧಪಕ್ಷದ ನಾಯಕರು ಮಾತನಾಡುವಾಗ ಒಂದು ರಾಷ್ಟ್ರೀಯ ಪಕ್ಷದ ನಾಯಕರು ಕೂಡ ಅವರಾಗಿದ್ದಾರೆ ಅಂದಾಗ ರುಜುವಾತು ಇಲ್ಲದೆ ನಾವು ಸಹಜವಾಗಿ ಮಾತನಾಡಿದರೆ ಅದು ಮತ್ತೆ ಪತ್ರಿಕೆಯಲ್ಲಿ ಹೋಗುತ್ತದೆ. ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿ ಶಕ್ತಿ ಇಲ್ಲ, ಅವರು ಬರುವುದಿಲ್ಲ, ನಮ್ಮ ಸಂಬಂಧಿಕರು ಯಾರೂ ಇಲ್ಲ ಎಂದು ಪುನಃ ಒಂದು ಹೇಳಿಕೆಯನ್ನು ಕೊಡುವುದಕ್ಕಾಗುತ್ತದೆಯೇ? ಅದುದರಿಂದ ಇಡೀ ರಾಷ್ಟ್ರದಲ್ಲಿ ಆ ಇಮೇಜ್ ಡ್ಯಾಮೇಜ್ ಆಗುತ್ತದೆ ಎನ್ನತಕ್ಕಂಥದ್ದನ್ನು ಕೂಡ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ರಿಪೇರಿ ಮಾಡುವುದು ಬಹಳ ಕಷ್ಟ. ಒಂದು ಸಾರಿ ಡ್ಯಾಮೇಜ್ ಆದಮೇಲೆ ರಿಪೇರಿ ಮಾಡಿಕೊಳ್ಳಬೇಕು ಎಂದು ಹೇಳಿದರೆ ಯಾರಿಂದಲೂ ಸಾಧ್ಯವಿಲ್ಲ.

ಅದಕ್ಕಾಗಿ ದಯವಿಟ್ಟು ಇಂಥಹ ಉನ್ನತವಾದಂಥ ಸ್ಥಾನದಲ್ಲಿ ಇರತಕ್ಕಂಥ ಯಾರೇ ರಾಷ್ಟ್ರೀಯ ನಾಯಕರು ಇರಬಹುದು, ಇವತ್ತು ಪ್ರಧಾನಮಂತ್ರಿಗಳು ಇರಬಹುದು, ಮುಖ್ಯಮಂತ್ರಿಗಳು ಇರಬಹುದು, ಅಥವಾ ನಿಮ್ಮ ಪಕ್ಷದ ನಾಯಕರೂ ಕೂಡ ಇರಬಹುದು. ಅವರುಗಳ ಬಗ್ಗೆ ಸಹಜವಾಗಿ, ಲಘುವಾಗಿ ಮಾತನಾಡಿದರೆ ಅಥವಾ ಯಾವುದೋ ಅವರ ಪಕ್ಷದ ಸಭೆಯಲ್ಲಿ ಇದು ನಡೆಯಿತು ಎಂದು ಹೇಳಿ ತರಾತುರಿಯಲ್ಲಿ ಅವರ ಹೆಸರು ಹೇಳಿ ಹೀಗೆ ಮಾಡಿದಿರಿ, ಎಂದು ಹೇಳಿದರೆ ಅದು ಯಾರಿಗೂ ಕೂಡ ಘನತೆಗೌರವ ತರತಕ್ಕಂಥದ್ದು ಆಗುವುದಿಲ್ಲ, ನಿಮ್ಮ ಪಕ್ಷದವರೂ ಕೂಡ ಕೆಲವು ಕಡೆಗಳಲ್ಲಿ ಅಧಿಕಾರದಲ್ಲಿದ್ದಿರಿ. ಆದ್ದರಿಂದ ನಿಮ್ಮಲ್ಲಿ ರುಜುವಾತು ಇದ್ದರೆ ಇಂಥವರ ಮಕ್ಕಳು ಮಾಡಿದ್ದಾರೆ, ಹೀಗೆ ಮಾಡಿದ್ದಾರೆ ಎಂದು ಹೇಳಿ. ಸಾಧ್ಯವಾದರೆ ಅವರು ಡಿಫೆಂಡ್ ಮಾಡುತ್ತಾರೆ. ಇಲ್ಲದಿದ್ದರೆ ಅವರೂ ಕೂಡ ಪ್ರಾಸಿಕ್ಯೂಟ್ ಮಾಡುವುದಿದ್ದರೆ ಮಾಡಲಿ. ಆದರೆ ಈ ರೀತಿಯಾಗಿ ದಯವಿಟ್ಟು ಲಘುವಾಗಿ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬಾರದು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಸತ್ಯಾಂಶವನ್ನು ಒಪ್ಪುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನನಗೆ ಅರ್ಥವಾಗುತ್ತಿಲ್ಲ, ತಾವು ದಾಖಲೆಯನ್ನು ತರಿಸಿ ನೋಡಿ. ದೊಡ್ಡವರ ಇಮೇಜ್ ಹಾಳಾಗಬಾರದು ಎಂತಲೇ ನಾನು ಇವತ್ತು ಪ್ರಸ್ತಾಪ ಮಾಡುತ್ತಿರುವಂಥದ್ದು. ನಾನು ಏನು ಮಾತನಾಡಿದ್ದೇನೆ. ಇವತ್ತು ಅತ್ಯಂತ ಉನ್ನತ ಸ್ಥಾನದಲ್ಲಿರುವಂಥ ಪ್ರಧಾನಿಯವರ ಹೆಸರನ್ನು ತಂದರೆ ಅಕ್ಷಮ್ಯ ಅಪರಾಧ. ಇನ್ನೊಂದು ರಾಜ್ಯದ ಮುಖ್ಯಮಂತ್ರಿ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಿ ಪತ್ರಿಕೆಯಲ್ಲಿ ಬಂದಿರುವಂಥದ್ದು ಅಪರಾಧ. ಮಾನ್ಯ ಅಧ್ಯಕ್ಷರೇ, ನಾನು ನಿಮ್ಮನ್ನು ಕೇಳುತ್ತೇನೆ, ಇವತ್ತು ಇಲ್ಲಿ ಚರ್ಚೆಯಾಗಿ ಅವರ ಹೆಸರು ಅಪ್ರಸ್ತುತ, ಪತ್ರಿಕೆಯಲ್ಲಿ ಬಂದಿರುವಂಥದ್ದು ಸರಿಯಲ್ಲ ಎಂಬುದು ಖಂಡಿತವಾಗಿಯೂ ರಾಜ್ಯದ ಜನರಿಗೆ ಗೊತ್ತಾಗಬೇಕಾಗುತ್ತದೆ ಎನ್ನುವುದು ಸತ್ಯ ಸಂಗತಿ.

ಅದಕ್ಕಾಗಿ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, 26ನೇ ತಾರೀಖು ಟೆಂಡರನ್ನು ಓಡೆಯುವುದಕ್ಕೆ ಕೊನೆಯ ದಿನವೆಂದು. ಇವತ್ತು 30ನೇ ತಾರೀಖು. ಹೌದು, ಟೆಂಡರನ್ನು ಓಪನ್ ಮಾಡಿದ್ದಾರೆ. 26ನೇ ತಾರೀಖು ಟೆಂಡರ್ ಆಗಿದೆ, ಯಾರಿಗೆ ಕೊಟ್ಟಿದ್ದೀರಿ ಎಂದು ಹೇಳಿ. ಆದರೆ ಇಲ್ಲಿ ಪ್ರಶ್ನೆ ಅದಲ್ಲ. ಇವತ್ತು ನಾನು ಪ್ರಸ್ತಾಪ ಮಾಡುತ್ತಿರತಕ್ಕಂಥದ್ದು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನಾನು ಪ್ರಶ್ನೆ ಮಾಡುತ್ತಿರತಕ್ಕಂಥದ್ದು ಬಹಳ ಪ್ರಾಮುಖ್ಯವಾದ ವಿಷಯ ಎಂದು ಹೇಳುತ್ತಿದ್ದೇನೆ. ಯಾವ ಹೌಸಿಂಗ್ ಬೋರ್ಡ್ 'ಆಶ್ರಯ' ಯೋಜನೆ ಅವ್ಯವಹಾರಕ್ಕೆ ಕಾರಣವಾಗಿತ್ತೋ ಆ ಬೋರ್ಡಿಗೆ ಎಲ್ಲಾ ಕಾನೂನುನ್ನು ಬದಿಗೊತ್ತಿ ಕೊಟ್ಟಿರುವಂಥದ್ದು ಸರಿಯೇ ಎಂದು ನಾನು ಕೇಳುತ್ತಿದ್ದೇನೆ.

ಇಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಎಸ್ಟಿಮೇಟ್ ಮಾಡಬೇಕಾದರೆ 50-60 ಕೋಟಿ ರೂಪಾಯಿ ಜಾಸ್ತಿ ಮಾಡಿಕೊಂಡು ಲೂಟಿ ಮಾಡತಕ್ಕಂಥದ್ದು ನಡೆದಿದೆ. ಅದಕ್ಕಾಗಿ ಈ ಟೆಂಡರನ್ನು ಒಪ್ಪಿಕೊಳ್ಳಬಾರದು ಹೊಸದಾಗಿ ಎಸ್ಟಿಮೇಟ್‌ನ್ನು ಮಾಡಿಸಬೇಕು. ಹೊಸದಾಗಿ ಟೆಂಡರನ್ನು ಕರೆಯಬೇಕು ಎನ್ನತಕ್ಕಂಥ ದೃಷ್ಟಿಯಿಂದಲೇ ಸಾರ್ವಜನಿಕ ಮಹತ್ವವಾದ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿರುವಂಥದ್ದು. ಪಾರ್ಟಿ ಮೀಟಿಂಗ್‌ನಲ್ಲಿ ಈ ವಿಷಯ ಬಂತು ಎಂಬುದು ನನಗೆ ಗೊತ್ತಿಲ್ಲ. ನಿಮಗೆ ಸ್ವಾತಂತ್ರ್ಯ ಇದೆ, ನೀವೇನಾದರೂ ಮಾಡಿಕೊಳ್ಳಿ. ಒಂದು ಸಾರಿ ಸದನ ನಡೆಯಬೇಕಾದರೆ ಆ ಸಂದರ್ಭದಲ್ಲಿ ಪತ್ರಿಕೆಯನ್ನು ಹಗುರವಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಈ ರಾಜ್ಯದ ಜನರಿಗೆ ಶಾಸಕಾಂಗ ಪಕ್ಷದಲ್ಲಿ ಏನು ನಡೆಯುತ್ತಿದೆ, ಈ ವಿಷಯವನ್ನು ರಾಜ್ಯದ ಕೋಟ್ಯಾಂತರ ಜನರಿಗೆ ಪ್ರಮುಖವಾಗಿ ತಿಳಿಸುತ್ತಿರುವಂಥ ಒಂದು ಸರಿಯಾದಂಥ ಮಾಧ್ಯಮವುದು. ಆದ್ದರಿಂದ ಅಲ್ಲಿ ಬಂದಿರುವುದನ್ನು ನಾನು ಒಪ್ಪುತ್ತೇನೆ. ಅದು ಸರಿ ಇಲ್ಲದಿದ್ದರೆ ಕ್ಲಾರಿಫಿಕೇಷನನ್ನು ಕೊಡಿ. ಪತ್ರಿಕೆಯಲ್ಲಿ ಅದೇ ವಿಷಯ ಮತ್ತೆ ಬರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ತಮ್ಮ ನಿಲುವನ್ನು ಸಮರ್ಥಿಸುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಸಭಾನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಪಕ್ಷದ ಸಭೆ ನಡೆಯತಕ್ಕದ್ದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಪಕ್ಷದ ಸಭೆಯು ನಡೆಯತಕ್ಕದ್ದು ಗೋಪ್ಯ ಅಲ್ಲಿ ಪತ್ರಿಕೆಯವರು ಯಾರೂ ಇರುವುದಿಲ್ಲ. ಅಲ್ಲಿ ಏನೋ ಒಂದು ವಿಷಯ ಪ್ರಸ್ತಾಪ ಆಯಿತು ಎನ್ನತಕ್ಕ ಆಧಾರದ ಮೇಲೆ ವಿರೋಧ ಪಕ್ಷದ ನಾಯಕರು ಇವತ್ತು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದಾರಲ್ಲಾ!

ಅಧ್ಯಕ್ಷರು : ಖರ್ಗೆಯವರು ಹೇಳಿದ್ದು ರಿಪಿಟಿಷನ್ ಮಾಡುವುದು ಬೇಡ. ದಯಮಾಡಿ ಜೀರೋ ಅವರ್‌ನಲ್ಲಿ ಡಿಬೇಟ್ ಮಾಡಬೇಡಿ.

ಶ್ರೀ ಟಿ.ಬಿ. ಜಯಚಂದ್ರ : ನಮ್ಮ ನಾಯಕರು ಹೇಳಿರತಕ್ಕ ಹೇಳಿಕೆಯನ್ನು ನಾನು ಖಂಡಿತ ಸ್ವಾಗತಿಸುತ್ತೇನೆ. ಅದಕ್ಕೋಸ್ಕರವಾಗಿ ನಾನು ಎದ್ದು ನಿಂತಿದ್ದೇನೆ. ಆದರೆ, ಪತ್ರಿಕಾ ಮಾಧ್ಯಮದವರು ಕೂಡ ಇಂತಹ ಸುದ್ದಿಗಳನ್ನು ದೇಶದ ನಾಯಕರ ಹೆಸರನ್ನು ಪ್ರಸ್ತಾಪ ಮಾಡಬೇಕಾದರೆ ಸ್ವಲ್ಪ ಎಚ್ಚರಿಕೆಯಿಂದ ಹೋಗತಕ್ಕದ್ದು ಬಹಳ ಸೂಕ್ತ. ಈ ಒಂದು ತಿಳುವಳಿಕೆಯನ್ನು ಅವರು ಪಾಲಿಸಿಕೊಂಡು ಹೋಗಬೇಕಾಗುತ್ತದೆ. ಅದೇ ರೀತಿಯಾಗಿ ವಿರೋಧ ಪಕ್ಷದವರು ಪ್ರಸ್ತಾಪ ಮಾಡಬೇಕಾದರೆ ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನನಗೆ ಯಾರ ಬಗ್ಗೆಯೂ ಸಹ ಗೌರವ ಕಡಿಮೆ ಇಲ್ಲ. ಪತ್ರಿಕೆಯವರ ಬಗ್ಗೆಯೂ ಗೌರವ ಇದೆ. ಬಹುಶಃ ನನಗೆ ಪತ್ರಿಕೆಯವರಿಂದ, ಆಗಿರುವ ಡ್ಯಾಮೇಜ್ ಈ ರಾಜ್ಯದಲ್ಲಿ ಯಾರಿಗಾದರೂ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು : ಡ್ಯಾಮೇಜ್ ಜಾಸ್ತಿ ಆದಾಗಲೇ ಗೌರವ ಹೆಚ್ಚು ಆಗುವುದು.

ಶ್ರೀ ಹೆಚ್.ಡಿ. ದೇವೇಗೌಡ : ದೇವೇಗೌಡರಿಗೆ ಎಷ್ಟು ಆಯಿತು, ದೇವೇಗೌಡರ ರಾಜಕೀಯ ಜೀವನ ಸಂಪೂರ್ಣವಾಗಿ ನಾಶ ಮಾಡಬೇಕು ಎಂದು ಹೇಗೆ ನಡೆಯಿತು ಎಂಬ ಬಗ್ಗೆ ಚರ್ಚೆ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾನಾಯಕರು ಏಕೆ ಹೀಗೆ ಹೇಳುತ್ತಿದ್ದೀರೋ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಇಂತಹ ವಿಷಯದಲ್ಲಿ ನನಗೆ ತಿಳಿದಂತಹದನ್ನು ಹೇಳುತ್ತೇನೆ. ನಿಮ್ಮ ತೀರ್ಪಿಗೆ ನಾನು ತಲೆ ಬಾಗುತ್ತೇನೆ. ನಾನು ಯಾರ ಪರವಾಗಿಯೂ ಇಲ್ಲಿ ಇಲ್ಲ. ಆದರೆ ಒಂದೇ ಒಂದು ಶಬ್ದ ಹೇಳುತ್ತೇನೆ. ನಾನು ಪತ್ರಿಕೆಯವರ ಬಗ್ಗೆ ಎಂದೂ ಅಗೌರವ ತೋರಿಸಿಲ್ಲ. ಆದರೆ ಪತ್ರಿಕೆಯಲ್ಲಿ ಬಂದಂತಹ ವಿಷಯ ಏನಿದೆ, ಅದೇ ಇವತ್ತು ಈ ಸದನದಲ್ಲಿ ಗ್ರಾಸ ಆಗಬಾರದು. You must try to verify. ಅದೇನು ಬರುತ್ತದೆ ನೋಡಬೇಕು. ಒಂದು ಸುದ್ದಿ ಬರುತ್ತದೆ ವೆರಿಫೈ ಮಾಡಿ. ಶ್ರೀಮಾನ್ ನಂಜೇಗೌಡರು ಮಾನ್ಯ ಹಿರಿಯ ಸದಸ್ಯರು ಇಲ್ಲಿ ಮಂತ್ರಿಗಳಾಗಿದ್ದರು. ಅವರು ಚರ್ಚೆ ಮಾಡಿದ್ದಾರೆ. ಒಂದು ವಿಷಯ ಬಂದ ಮೇಲೆ ನೀವು ಅದರ ಬಗ್ಗೆ ಸಾಕಷ್ಟು ಮೆಟೀರಿಯಲ್ಸ್ ತೆಗೆದುಕೊಳ್ಳುವುದಕ್ಕೆ ಬೇಕಾದಷ್ಟು ಸಾಧನಗಳು ಇದ್ದಾವೆ; ನಾವು ಆ ಕೆಲಸ ಮಾಡಿದ್ದೇವೆ. ಶ್ರೀಮಾನ್ ರಾಮಕೃಷ್ಣ ಅವರು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಖರ್ಗೆಯವರು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಕೆಲಸ ಮಾಡಿದ್ದಾರೆ. ಅಲ್ಲಿರುವ ಆಶ್ರಯದಲ್ಲಿ 30 ಕೋಟಿ ರೂಪಾಯಿಗಳು ಹೋಯಿತು ಎಂದರೆ ನಾನು ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ದಯಮಾಡಿ ಹೇಳಿ. ಮಾನ್ಯ ವಿರೋಧ ಪಕ್ಷದನಾಯಕರಲ್ಲಿ ನಾನು ಕಳಕಳಿಯ ಪ್ರಾರ್ಥನೆ ಮಾಡಿ ಕೇಳುತ್ತೇನೆ, ಯಾವುದಕ್ಕೆ ಏನು ಸಂಬಂಧ ಇದೆ? ಪ್ರತಿಯೊಂದು ವಿಷಯ ಪ್ರಸ್ತಾಪ ಮಾಡಿದ್ದಾರೆ. ನಾನು ಟೆಂಡರ್ ಒಡೆದಿಲ್ಲ ಎಂದು ಹೇಳಿದೆ. ಒಡೆದಿದ್ದಾರೆ ಎಂದು ನೀವು ಹೇಳಿದಿರಿ. ಟೆಂಡರ್ ಒಡೆಯಬೇಕಾದರೆ ತಮಗೆ ಗೊತ್ತಿದೆ. ಒಂದು ಡೇಟ್ ಕೊಡುತ್ತಾರೆ, Bidders must be present ಎಂದು ಹೇಳುತ್ತಾರೆ. ಬಿಡ್ಡರ್ಸ್ ಅವರ ಸಮುಖದಲ್ಲಿ ಟೆಂಡರ್ ಒಡೆಯುತ್ತಾರೆ. ನೀವು ನೂರಾರು ಟೆಂಡರ್‌ಗಳನ್ನು ಡಿಸ್‌ಪೋಸ್ ಮಾಡಿರಬಹುದು ನೀರಾವರಿ ಮಂತ್ರಿಯಾಗಿ ನಾನು ಅಫಿಷಿಯಲ್ ಆಗಿ ಚೀಫ್ ಮಿನಿಸ್ಟರ್ ಆಗಿ ಹೇಳುತ್ತಿದ್ದೇನೆ. ಟೆಂಡರ್ ಓಪನ್ ಮಾಡಿಲ್ಲ, ಡೇಟ್ ಕೊಟ್ಟು ಒಡೆಯುತ್ತೇವೆ. ನೀವು ಹೇಳಿದ ಹಾಗೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇರೆ ಟೆಂಡರ್ ತೆಗೆದುಕೊಂಡು....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನೋ ನೋ....

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಚಾರ್ಜ್ ಮಾಡುತ್ತಿದ್ದೇನೆ. 24ನೇ ತಾರೀಖು ಲಾಸ್ಟ್ ಡೇಟ್ ಆದ ಮೇಲೆ ಓಪನ್ ಮಾಡದೇ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಬಹಳ ಗೌರವದಿಂದ ಮಾತನಾಡಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಸ್ವಾಮಿ ನಿಮ್ಮ ಹತ್ತಿರ ಗೌರವ ಕಲಿಯುವುದು? ಗೌರವ ಬಿಟ್ಟು ನಾನು ಮಾತನಾಡಿದ್ದೇನೋ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಬೇಜವಾಬ್ದಾರಿಯಿಂದ ಮಾತನಾಡಬಾರದು

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಿಂದ ನಾನು ಗೌರವದ ಪಾಠ ಕಲಿಯಬೇಕಾಗಿಲ್ಲ. ಜನ ಈ ಸ್ಥಾನ ಕೊಟ್ಟಿದ್ದಾರೆ. ಹೇಗೆ ನಡೆದುಕೊಳ್ಳಬೇಕು ಎಂದು ಜನ ಹೇಳಿ ಕಳುಹಿಸಿದ್ದಾರೆ. ನಿಮ್ಮಿಂದ ನಾನು ಕಲಿಯಬೇಕಾಗಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಗೌರವದಿಂದ ಮಾತನಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಗೌರವದಿಂದ ಮಾತನಾಡುವುದನ್ನು ಕಲಿಯಿರಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರು ಏನೋ ಹೇಳುತ್ತಿದ್ದಾರೆ. ಸ್ವಲ್ಪ ವಾತಾವರಣ ತಿಳಿಯಾಗಲಿ.

ಶ್ರೀ ವಾಟಾಳ್ ನಾಗರಾಜ್ : ನಾನು ಯಾರ ಪರವಾಗಿಯೂ ಮಾತನಾಡತಕ್ಕ ಪ್ರಶ್ನೆ ಇಲ್ಲ. ಶ್ರೀಮಾನ್ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ತಾವು ಕೋಪಿಸಿಕೊಳ್ಳಬೇಡಿ. ಇನ್ನೂ ಕೋಪ ನಿಮಗೆ ಇಳಿದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕಡೆ ಏಕೆ ಕೋಪ ಮಾಡಿಕೊಳ್ಳಲಿ?

ಶ್ರೀ ವಾಟಾಳ್ ನಾಗರಾಜ್ : ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ಸ್ವಲ್ಪ ಸಾವಧಾನವಾಗಿ ತಾವು ಪ್ರಸ್ತಾಪ ಮಾಡಿ. ತಾವು ಇಲ್ಲಿ ಕುಳಿತಿದ್ದಾಗ ಇದ್ದ ಧಾಟಿ ಬೇಡ.

SRI B.S. YEDIYURAPPA : I am very sorry. ನಾನು ಯಾವತ್ತೂ ಆ ತರಹ ಕೆಲಸ ಮಾಡುವವನಲ್ಲ. ಯಾವ ತರಹ ಕೆಲಸ ಮಾಡಬೇಕು ಎಂಬುದು ನನಗೆ ಗೊತ್ತಿದೆ. ಉಪದೇಶ ಪಡೆಯುವ ಅಗತ್ಯ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಕೋಪಿಸಿಕೊಳ್ಳಬೇಡಿ. ಉಪದೇಶ ನಿಮಗೆ ಹೇಳುವುಷ್ಟು ನನಗೆ ಅಗತ್ಯ ಇಲ್ಲ. ಆದರೆ ತಾವು ಕೋಪ ಮಾಡಿಕೊಳ್ಳಬೇಡಿ. ಇನ್ನೂ ಕೋಪ ಇಳಿದಿಲ್ಲ ತಮಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೋಟ್ಯಾಂತರ ರೂಪಾಯಿ ಲೂಟಿ ಆಗಿದೆ, ಸ್ವಂತದ್ದು ಅಲ್ಲ. ಇವರು ಮಾಡುತ್ತಿರುವ ಅವ್ಯವಹಾರವನ್ನು ನೋಡಿದರೆ, ಹೊಟ್ಟೆ ಉರಿಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಹೇಳೋಣ. ಚರ್ಚೆ ಮಾಡೋಣ. ಹಿರಿಯರು ಕೋಪಿಸಿಕೊಳ್ಳಬೇಡಿ. ಏಕೆಂದರೆ ತಾವು ವಿರೋಧ ಪಕ್ಷದ ನಾಯಕರೂ ಆಗಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮ ವಿರೋಧವಾಗಿ ಮಾತಾಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಗೌರವದ ಪ್ರಶ್ನೆ ಏನು ಬಂತು ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಗೌರವದಿಂದ ಮಾತನಾಡಿ ಎಂದು ಹೇಳಿದೆ. ನಿಮಗೆ ಏನು ನಾನು ಹೇಳಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ದೇಶಪಾಂಡೆಯವರು ಹೇಳಿದ್ದುದು, ತಾವು ಗೌರವದಿಂದ ನಡೆದುಕೊಳ್ಳುತ್ತಿಲ್ಲವೆಂದಲ್ಲ. ಸಭಾ ನಾಯಕರಿಗೆ ಗೌರವ ಕೊಟ್ಟು ಮಾತನಾಡಿ ಎಂದಷ್ಟೇ ಹೇಳಿದ್ದುದು. ಜವಾಬ್ದಾರಿಯಿಂದ ಮಾತನಾಡಿ ಎಂದು ಹೇಳಿದ್ದಾರೆ. ಇದು ಬೇಜವಾಬ್ದಾರಿ ಎಂದರ್ಥವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜವಾಬ್ದಾರಿಯಿರಬೇಕು, ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದೆಂದು ಹೇಳಿದ್ದಾರೆ. ಗೌರವದ ಪಾಠ ನಿಮ್ಮಿಂದ ಕಲಿಯುವ ಅಗತ್ಯವಿಲ್ಲ. ನನ್ನ ಹತ್ತಿರ ಈ ಕುರಿತು ಮಾಹಿತಿಗಳಿವೆ. ಮುಖ್ಯಮಂತ್ರಿಗಳ ಬಾಯಿಂದ ಏನು ಬರುತ್ತದೆಯೋ ಅದನ್ನು ಕೇಳಿದ ನಂತರ ನಾನು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಸದನದಲ್ಲಿ ಏನು ಮಾಡುತ್ತಿದ್ದೇವೆಂಬುದನ್ನು ನಾಡಿನ ಲಕ್ಷಾಂತರ ಜನರು ನೋಡುತ್ತಿದ್ದಾರೆ. ನಾವು ಇಲ್ಲಿ ಬಂದಿರುವುದು ಸದನದಲ್ಲಿ ಗಲಾಟೆ ಮಾಡುವುದಕ್ಕಾಗಲಿ ಅಥವಾ ಒಬ್ಬರ ಮೇಲೊಬ್ಬರು ಎಗರಾಡುವುದಕ್ಕಲ್ಲ. ಏನಾದರೂ ವಿಷಯವಿದ್ದರೆ ಅಧ್ಯಕ್ಷರ ಅನುಮತಿ ಪಡೆದು ಶಾಂತ ರೀತಿಯಿಂದ ಪ್ರಸ್ತಾಪ ಮಾಡಬೇಕು. ಅವರು ವಿಷಯ ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ಬಿಟ್ಟು ಈ ರೀತಿ ಕಚ್ಚಾಟ ಮಾಡುವುದು ಈ ಸದನಕ್ಕೆ ಗೌರವ ತರುವಂಥಾದ್ದಲ್ಲ. ಇದನ್ನು ಹಿರಿಯ ಸದಸ್ಯರುಗಳು ಗಮನಕ್ಕೆ ತೆಗೆದುಕೊಂಡು ಹೊಸ ಸದಸ್ಯರುಗಳಿಗೆ ಮಾದರಿಯಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಂಥ ವಿಷಯವೇನೆಂದರೆ, ಸುಮಾರು 270 ಕೋಟಿ ರೂಪಾಯಿಗಳ ಗುತ್ತಿಗೆಯನ್ನು ಪ್ರಧಾನಮಂತ್ರಿಯವರ ಸಂಬಂಧಿಕರಿಗೆ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಯಾದ ಶರದ್ ಪವಾರ್‌ರವರ ಸಂಬಂಧಿಕರಿಗೆ ಕೊಟ್ಟಿರುವುದರ ಬಗ್ಗೆ ಗಮನ ಸೆಳೆದಿದ್ದಾರೆ. ಈ ಕುರಿತು ಅವರ ಹತ್ತಿರ ಏನೇನು ಮಾಹಿತಿಗಳಿವೆಯೋ ಅವೆಲ್ಲವನ್ನೂ ಸದನದಲ್ಲಿ ಮಂಡಿಸುವುದಕ್ಕೆ ತಾವು ಅನುಮತಿ ಕೊಡಿ. I welcome it. I will answer them point by point.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿವರಗಳನ್ನು ನಾನು ಕೊಡುತ್ತೇನೆ. ಆದರೆ, ನನ್ನ ಪ್ರಶ್ನೆಯೇನೆಂದರೆ, ಸನ್ಮಾನ್ಯ ಸಭಾ ನಾಯಕರು ಸದನವನ್ನು ಉದ್ದೇಶಪೂರ್ವಕವಾಗಿ ತಪ್ಪು ದಾರಿಗೆಳೆಯುವಂಥ ಪ್ರಯತ್ನ ಮಾಡಿದ್ದಾರೆ. ಬೇಕಾದರೆ ನಾನು ಕೊಟ್ಟಿರುವ ನೋಟೀಸ್ ಅನ್ನು ದಯಮಾಡಿ ಓದಿ ನೋಡಿ. ಇದನ್ನು ಸಭಾ ನಾಯಕರು ತಿರುಚುವುದು ಬೇಡ. ಟೆಂಡರ್ ಕರೆಯುವಲ್ಲಿ ಬಹಳ ಅವ್ಯವಹಾರ ನಡೆದಿದೆ. ನಾನು ಪ್ರಧಾನಿಯವರ ಹೆಸರನ್ನು ಹೇಳಿಲ್ಲ, ಆದರೆ, ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಹೆಸರು ಬಂದಿರುವುದು ಸರಿಯಲ್ಲವೆಂದು ಹೇಳಿದೆ. ಇದಕ್ಕೆ ಸರ್ಕಾರದಿಂದ ಸ್ಪಷ್ಟೀಕರಣ ಬೇಕಾಗುತ್ತದೆಂದು ಹೇಳಿದೆ. ಟೆಂಡರ್ ಎಸ್ಟಿಮೇಟ್ ಮಾಡುವ ಸಮಯದಲ್ಲಿ ಮೋಸ ನಡೆದಿದೆ. ಪಿಡಬ್ಲ್ಯೂಡಿಯಿಂದ ಟೆಂಡರ್ ಅನ್ನು ಕರೆಯುವ ಬದಲಾಗಿ ಹೌಸಿಂಗ್ ಬೋರ್ಡ್‌ನಿಂದ ಕರೆದಿದ್ದಾರೆ. ಇದರಿಂದಾಗಿ ಅವ್ಯವಹಾರ ನಡೆಯಲು ಕಾರಣವಾಗಿದೆ.

ಮತ್ತು ಎಸ್ಟಿಮೇಟ್ ಮಾಡುವಂಥ ಸಂದರ್ಭದಲ್ಲಿ ಸುಮಾರು 50-60 ಕೋಟಿ ರೂಪಾಯಿಗಳ ಜಾಸ್ತಿ ಎಸ್ಟಿಮೇಟ್ ಮಾಡಿ ತಮಗೆ ಬೇಕಾದಂಥವರಿಗೆ ಬೇರೆ ರಾಜ್ಯದವರಿಗೆ ಕೊಡುವ ಷಡ್ಯಂತರ ನಡೆದಿದೆ. 26ನೇ ತಾರೀಖು ಟೆಂಡರ್ ಅನ್ನು ಒಡೆಯಬೇಕಾಗಿತ್ತು, ಒಡೆದಿಲ್ಲ, ಹೌಸಿಂಗ್ ಬೋರ್ಡ್‌ನಲ್ಲಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದು ನಮಗೆ ಗೊತ್ತಿಲ್ಲವೇ? ಸಮಿತಿಯವರು 26ನೇ ದಿನಾಂಕದಂದು ಟೆಂಡರ್ ಒಡೆಯಬೇಕಾಗಿತ್ತು. ಸಭಾ ನಾಯಕರು ಹೇಳಿರುವ ರೀತ್ಯ ಟೆಂಡರ್ ಒಡೆದಿಲ್ಲ, ಅಂದರೆ ಏನರ್ಥ? ನಿಮಗೆ ಬೇಕಾದಂಥವರಿಂದ ಟೆಂಡರ್‌ಗಳನ್ನು ಕರೆಯಿಸಿಕೊಂಡು ಟೆಂಡರ್ ಅನ್ನು ರಿವೈಸ್ ಮಾಡಿ ಎಂದು ಟೆಂಡರ್ ಅನ್ನು ಒಡೆಯದಿರುವುದಕ್ಕೆ ಕಾರಣವೇನು?

ಶ್ರೀ ಆರ್.ಎಲ್. ಜಾಲಪ್ಪ : ಇದು ಸಣ್ಣತನದ ಪರಮಾವಧಿ.

SRI R.V. DESHPANDE : It is a serious allegation. What is the charge? He is talking about replacement of tender and all that. What is the charge? It is a very serious charge.

(INTERRUPTIONS)

MR. SPEAKER : Mr. Deshpandeji, I have been observing everything carefully. I am conversant with the practice and conventions of this House. I shall not fail in upholding the dignity of this House. I have reserved my remarks. I have called the Hon'ble Law Minist since he has requested me to give an opportunity to speak. Please wait. Please have patience.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರತಕ್ಕಂಥ ವಿಚಾರದಲ್ಲಿ ಕೆಲವು ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಈ ಗುರುತರವಾದ ಆಪಾದನೆಗಳು ಯಾವುದೆಂದರೆ, ಯಾವ ಒಂದು ಹೌಸಿಂಗ್ ಬೋರ್ಡ್ ಮುಖಾಂತರ ಟೆಂಡರ್ ಕರೆದಿದ್ದರು, ಈ ವ್ಯವಹಾರದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಲೂಟಿಯಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಅವರು ಬಳಸಿರತಕ್ಕಂಥ ಪದದ ಬಗ್ಗೆ ಅವರಿಗೆ ಹೇಳುತ್ತಿದ್ದೇನೆ.

10.15 ಎ.ಎಂ

ಎರಡನೆಯದಾಗಿ ಟೆಂಡರ್‌ಗಳನ್ನು 26ನೇ ತಾರೀಖು ತೆರೆಯಬೇಕಾಗಿತ್ತು, ಆದರೆ ಅದನ್ನು ತೆರೆಯದಿರುವುದರಿಂದ ಯಾವ್ಯಾವ ಟೆಂಡರ್‌ಗಳು ಬಂದಿತ್ತೋ ಅದರ ಜೊತೆಗೆ ತಮಗೆ ಬೇಕು ಬೇಕಾದವರ ಟೆಂಡರ್‌ಗಳನ್ನು ತೆಗೆದುಕೊಂಡು ಅವರಿಗೆ ಟೆಂಡರ್‌ನ್ನು ಕೊಡುವುದಕ್ಕೆ ಹುನ್ನಾರ ನಡೆಯುತ್ತಿದೆ. ಮೂರನೆಯದಾಗಿ, ರಾಷ್ಟ್ರದ ಪ್ರಧಾನಿಗಳ ಮಗನ ಹೆಸರು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಹೆಸರನ್ನು ಈ ವಿವರಣೆಯಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ನಾಲ್ಕನೆಯದಾಗಿ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುತ್ತಿರತಕ್ಕ ಸಂದರ್ಭದಲ್ಲಿ ಟೆಂಡರನ್ನು ಕರೆದಿರುವ ಬಗ್ಗೆ ಯಾವುದೇ ರೀತಿಯಾದ ವಿಚಾರ ನನಗೆ ಗೊತ್ತಿಲ್ಲ, ಅದನ್ನು ತೆರೆದ ಮೇಲೆ ನಮಗೆ ಯಾವುದೇ ವಿಚಾರ ಗೊತ್ತಾಗಬೇಕು ಎನ್ನತಕ್ಕ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿದರು. ನನ್ನ ಹತ್ತಿರ ಇದರ ಮಾಹಿತಿ ಇದೆ ಎನ್ನುವ ಬಗ್ಗೆ ಸಂಕ್ಷಿಪ್ತವಾಗಿ, ಉದ್ದೇಶ ಪೂರ್ವಕವಾಗಿ ವಿರೋಧ ಪಕ್ಷದ ನಾಯಕರು ಆಡಿರುವರು.

ಕೆಲವು ವಿಚಾರಗಳನ್ನು ವಿರೋಧ ಪಕ್ಷದ ನಾಯಕರ ಹತ್ತಿರ ಮಾಹಿತಿ ಇದ್ದಿದ್ದೇ ಆದರೆ ಬಹುಶಃ ಮುಖ್ಯಮಂತ್ರಿಗಳು ಹೇಳಿದ್ದಾರೆ ತೆರೆದ ಮನಸ್ಸಿನಿಂದ ಆ ಮಾಹಿತಿಯಲ್ಲಿ, ಈ ವ್ಯವಹಾರದಲ್ಲಿ ಅವ್ಯವಹಾರ ನಡೆದಿದೆ ಎಂದುಕೊಂಡಿದ್ದರೆ ಅದರ ಬಗ್ಗೆ ವಿಚಾರಣೆ ನಡೆಸಬೇಕಾಗಿರತಕ್ಕದ್ದು ಸರ್ಕಾರದ ಮತ್ತು ಮುಖ್ಯಮಂತ್ರಿಗಳ ಕರ್ತವ್ಯ. ಆದ್ದರಿಂದ ತಾವು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಮ್ಮ ಹತ್ತಿರ ಏನು ಮಾಹಿತಿ ಇದೆ ಅದನ್ನು ಸದನದ ಮೂಲಕ, ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡಬೇಕಾಗುತ್ತದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬಹುಶಃ ಹೌಸಿಂಗ್ ಬೋರ್ಡ್‌ನ ಯಾರಾದರೂ ಅಧಿಕಾರಿಗಳು ಅಥವಾ ಅದರ ಹಿನ್ನೆಲೆಯಲ್ಲಿ ಯಾರಾದರೂ ವ್ಯಕ್ತಿಗಳಿದ್ದರೆ ಅವರನ್ನು ನೇಣ ಹಾಕಬೇಕಾದ ಕಾರ್ಯಕ್ರಮವನ್ನು ಕೂಡ ಮಾಡಲೇಬೇಕಾಗುತ್ತದೆ. ಆದರೆ ನಾನೂ ಕೂಡ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಅವರೂ ಕೂಡ ಈಗ ಆ ರೀತಿ ಕೆಲಸ ಮಾಡುತ್ತಿದ್ದಾರೆ. ಈಗ ಅವರು ಗುರುತರವಾದ ಆಪಾದನೆಯನ್ನು ಮಾಡಿರತಕ್ಕ ಹಿನ್ನೆಲೆಯಲ್ಲಿ ಅದರಲ್ಲೂ ಕೆಲವು ವ್ಯಕ್ತಿಗಳ ಬಗ್ಗೆ ನಾವು ಆಪಾದನೆ ಮಾಡಿರತಕ್ಕ ಸಮಯದಲ್ಲಿ ಆ ವ್ಯಕ್ತಿಗಳು ನಿಜವಾಗಿಯೂ ಅದರಲ್ಲಿ ಕಾರಣ ಕರ್ತರಾಗಿದ್ದಾರೆಯೇ ಇಲ್ಲವೇ ಎನ್ನತಕ್ಕ ವಿಚಾರ ಬಂದಾಗ ನಾವು ಇರತಕ್ಕ ಮಾಹಿತಿಯನ್ನು ಒದಗಿಸಬೇಕಾಗಿರತಕ್ಕದ್ದು ನಮ್ಮ ಕರ್ತವ್ಯವಾಗುತ್ತದೆ.

ಕಾರಣ ವಿರೋಧ ಪಕ್ಷದ ನಾಯಕರು ನನ್ನ ಹತ್ತಿರ ಮಾಹಿತಿ ಇದೆ ಎಂದು ಹೇಳಿದ್ದಾರೆ. ಅವರು ಹೇಳುತ್ತಿರುವ ಹಲವಾರು ವಿಚಾರಗಳು ಕಡತದಲ್ಲಿ ಹೋಗಿದೆ. ನಾವು ಅದನ್ನು ಮುಚ್ಚಿಡಲು ಪ್ರಯತ್ನ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಬೈ ಇಂಪ್ಲಿಕೇಷನ್ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅರ್ಥ ಏನಾಗುತ್ತದೆಂದರೆ ಸರ್ಕಾರ ಈ ವ್ಯವಹಾರದಲ್ಲಿ ಲೂಟಿ ಮಾಡಲು ಹೊರಟಿದೆ ಎನ್ನುವ ಬಗ್ಗೆ ಬೈ ಇಂಪ್ಲಿಕೇಷನ್ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆದ್ದರಿಂದ ಅವರು ಮಾಹಿತಿಗಳೇನಾದರೂ ಇದ್ದರೆ ಅದನ್ನು ಒದಗಿಸಿಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಯಾವ ವಿಚಾರವನ್ನು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಸಬೇಕಾಗುತ್ತದೆ ಮತ್ತು ಅವರು ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಾವು ಸದನವನ್ನು ತಪ್ಪುದಾರಿಗೆ ಎಳೆಯುವ ಮಾತನಾಡುತ್ತಿಲ್ಲ. ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎಂದು ಹೇಳಿದರು. ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎನ್ನುವ ಬಗ್ಗೆ ಯಾವುದೇ ಮಾಹಿತಿಯನ್ನು ವಿರೋಧ ಪಕ್ಷದ ನಾಯಕರು ಕೊಡದಿದ್ದರೆ ಈ ಸದನವನ್ನು ತಪ್ಪುದಾರಿಗೆ ಎಳೆಯುತ್ತಿರುವರು ವಿರೋಧ ಪಕ್ಷದ ನಾಯಕರು, ಬಹುಶಃ ಪ್ರಚಾರಕ್ಕೋಸ್ಕರ ಈ ಮಾತನ್ನು ಆಡಿದ್ದಾರೆಂದು ಹೇಳಬೇಕಾಗುತ್ತದೆ. ತಾವು ಮಾಹಿತಿಯನ್ನು ಈ ಸದನದ ಮುಂದಿಡಿ. ಮಾಹಿತಿಯು ಸದನದ ಮುಂದೆ ಬರದಿದ್ದರೆ ಬಹುಶಃ ಅಗ್ಗದ ಪ್ರಚಾರಕ್ಕೋಸ್ಕರ ಸರ್ಕಾರದ ಮೇಲೆ ಈ ಒಂದು ಆರೋಪ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ತಾವು ಜವಾಬ್ದಾರಿ ಸ್ಥಾನದಲ್ಲಿ ಮಾತನಾಡುತ್ತಿದ್ದೀರಿ, ಜವಾಬ್ದಾರಿಯುತವಾಗಿ ಕೂಡ ಮಾತನಾಡಿದ್ದೀರೆಂದು ನನ್ನ ಅನಿಸಿಕೆ. ನಿಮ್ಮ ಹತ್ತಿರ ಮಾಹಿತಿ ಏನು ಇದೆ. ಅದನ್ನು ಸದನದ ಮುಂದಿಡಬೇಕಾಗುತ್ತದೆ. ರಾಜ್ಯದ ಜನತೆಗೆ ಅದು ಗೊತ್ತಾಗಬೇಕಾಗುತ್ತದೆ. ಎಲ್ಲೆಲ್ಲಿ ಅವ್ಯವಹಾರವಾಗಿದೆ, ಎಲ್ಲೆಲ್ಲಿ ಲೂಟಿಯಾಗಿದೆ ಅಂಥ ಪ್ರಕರಣಗಳ ಬಗ್ಗೆ ಮಾಹಿತಿ ಇದ್ದರೆ ಅದು ರಾಜ್ಯದ ಜನತೆಗೆ ಗೊತ್ತಾಗಬೇಕಾಗುತ್ತದೆ. ನಾವು ಅದನ್ನು ಸ್ವೀಕರಿಸಬೇಕಾಗುತ್ತದೆ. ದಯಮಾಡಿ ತಾವು ಮಾಹಿತಿಯನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಂಡಿದ್ದೇನೆ. ನಾನು ಸದನದಲ್ಲಿ ಎದ್ದು ನಿಂತು ಮುಖ್ಯಮಂತ್ರಿಗಳು ಉದ್ದೇಶ

ಪೂರ್ವಕವಾಗಿ ಸದನವನ್ನು ತಪ್ಪುದಾರಿಗೆಳಿಯತಕ್ಕ ಪ್ರಯತ್ನ ಮಾಡಿದ್ದಾರೆಂದು ಹೇಳಿದ್ದೇನೆ. ಯಾವ ಕಾರಣಕ್ಕಾಗಿ ಎಂದರೆ, ನಾನು ಪ್ರಾರಂಭದಲ್ಲಿ ಹೇಳಿರತಕ್ಕದ್ದನ್ನು ದಾಖಲೆಗಳನ್ನು ತೆಗೆಸಿ ನೋಡಿ. ಉದ್ದೇಶ ಪೂರ್ವಕವಾಗಿ ಈ ದೇಶದ ಪ್ರಧಾನಿಗಳ ಹೆಸರನ್ನು, ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಕುಟುಂಬದ ಹೆಸರನ್ನು ತರತಕ್ಕದ್ದು ಅಪ್ರಸ್ತುತ, ಸರಿಯಲ್ಲವೆಂದು ಅದಕ್ಕೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ತಾವು ದಾಖಲೆ ತೆಗೆದು ನೋಡಿ. ನನ್ನ ಹತ್ತಿರ ಮಾಹಿತಿ ಇದೆಯೆಂದು ಹೇಳಿದ್ದೇನೆ. ನನ್ನ ಹತ್ತಿರ ಇರತಕ್ಕ ಮಾಹಿತಿ ಯಾವುದೆಂದರೆ 250 ಕೋಟಿ ರೂಪಾಯಿಗಳ ಎಸ್ಟಿಮೇಟ್ ಏನು ಇವರು ಮಾಡಿದ್ದಾರೆ ಅದನ್ನು ಉದ್ದೇಶಪೂರ್ವಕವಾಗಿ 45 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿ ಎಸ್ಟಿಮೇಟ್ ಮಾಡಿರುವುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ವಿವರಣೆ ಇದೆ. ಅದನ್ನು ಕೊಡಲು ನಾನು ಸಿದ್ಧನಾಗಿದ್ದೇನೆ. ಅದನ್ನು ಯಾವ ಸಮಯದಲ್ಲಿ ಕೊಡಬೇಕು ಎಂಬುದು ನನಗೆ ಗೊತ್ತಿದೆ. ಎರಡನೆಯದಾಗಿ 26ನೇ ತಾರೀಖು ಟೆಂಡರನ್ನು ಒಡೆಯಬೇಕಾಗಿತ್ತು. ಆ ರೀತಿ ಅಂದು ಟೆಂಡರ್‌ನ್ನು ಒಡೆಯದೆ ಇಲ್ಲಿ ಬೇರೆ ಬೇರೆ ಅವ್ಯವಹಾರಕ್ಕೆ ಅವಕಾಶ ಮಾಡತಕ್ಕ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ತಾವು ಈ ರೀತಿ ಮಾತನಾಡಬಾರದು. ತಮ್ಮ ಬಳಿ ಅದರ ಮಾಹಿತಿ ಇದ್ದರೆ ಕೊಡಬೇಕು, ಲೂಟಿಯಾಗಿದೆ ಎನ್ನುವ ಬಗ್ಗೆ ಮಾಹಿತಿ ಕೊಡಬೇಕು.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನೀವು ಮಾಹಿತಿ ನೋಡಿ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಹತ್ತಿರ ಮಾಹಿತಿ ಇದೆ ನಾವು ಕೊಡುತ್ತೇವೆ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನೀವು ಮಾಹಿತಿ ಕೊಟ್ಟ ಮೇಲೆ, ನಾವು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ.

(ಗೊಂದಲ)

MR. SPEAKER : I will come to your rescue.

ಯಡಿಯೂರಪ್ಪನವರೇ, ನಾನು ನಿಂತಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಬೇಕು, ಎರಡು ನಿಮಿಷ ಸ್ಪಷ್ಟ ಆಯಿತು. ಒಂದು ಭಾರತೀಯ ಜನತಾ ಪಕ್ಷದ ಸದಸ್ಯರೆಲ್ಲಾ ಒಗ್ಗಟ್ಟಾಗಿದ್ದಾರೆಂದು ವ್ಯಕ್ತ ಆಯಿತು. ಎರಡನೆಯದು ನಾಣಯ್ಯನವರು ಇನ್ನೂ ವಿರೋಧ ಪಕ್ಷದ ನಾಯಕರು ಅಂತಲೇ ತಿಳಿದುಕೊಂಡಿದ್ದಾರೆ ಅವರಿಗೆ ಸ್ವಲ್ಪ ಸಮಯ ಬೇಕು. ನನಗೆ ಬಹಳ ಸಂತೋಷ. ನಿಮ್ಮ ಸದಸ್ಯರೆಲ್ಲರೂ ಕೂಡ ನಿಮ್ಮನ್ನು ನಾಯಕರು ಎಂದು ಆಯ್ಕೆ ಮಾಡಿಕೊಂಡದ್ದು ಬಹಳ ಶಿಸ್ತಿನಿಂದ ಇದ್ದಾರೆ. ದಯಮಾಡಿ ನೀವು ಹೇಳಬೇಕಾದರೆ ಒಬ್ಬೊಬ್ಬರಾಗಿ ಹೇಳಿ. ಶೂನ್ಯ ವೇಳೆ ಏನಿದೆ ಇದರ ವ್ಯಾಪ್ತಿಯನ್ನು ನಾವು ಮೀರಿ ಕೆಲಸ ಮಾಡಿದರೆ ನನಗೆ ಮುಜುಗರ ಏನೆಂದರೆ ತೀರಾ ಸಣ್ಣ ವಯಸ್ಸಿನವರನ್ನು ಕೂರಿಸಿದ್ದಕ್ಕೆ ಈ ತರಹ ಆಯಿತು ಎಂದು ಆಗುತ್ತದೆ. ಆದುದರಿಂದ ದಯಮಾಡಿ ತಾವು ನನ್ನನ್ನೂ ಕೂಡ ರಕ್ಷಣೆ ಮಾಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಸ್ವಾಮಿ, ನಾನು ತಮ್ಮ ಅನುಮತಿ ಮುಖೇನ ಹೋಗಬೇಕಾಗಿರುವುದರಿಂದ ನಾನು ಸಭೆಯ ಮುಂದೆ ಎರಡು ವಿಷಯಗಳನ್ನು ಇಡುವುದಕ್ಕೆ ಇಷ್ಟಪಡುತ್ತೇನೆ. ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದುದು ಕೇವಲ ಒಂದು ವಿಷಯಕ್ಕೆ ಸೀಮಿತವಾದಂಥ ವಿಷಯ. ಹೌಸಿಂಗ್ ಬೋರ್ಡ್‌ನಲ್ಲಿ ಪೂರ್ವ ಸಿದ್ಧತೆಯಾಗಿ ಕೆಲವು ಕಟ್ಟಡಗಳನ್ನು ಕಟ್ಟಲಿಕ್ಕೆ 220 ಕೋಟಿ ರೂಪಾಯಿ ಟೆಂಡರ್ ಕರೆದಿದ್ದೇವೆ. ಅದನ್ನು ಕಡತ ತರಿಸಿ ತಾವು ನೋಡಬೇಕು. ಈಗಲೇ ತೀರ್ಮಾನ ಕೊಡಿ ಎಂದು ನಾನು ಹೇಳುವುದಿಲ್ಲ. ಕಡತದಲ್ಲಿ ಪ್ರಧಾನ ಮಂತ್ರಿಗಳ ಹೆಸರು ಎಳಿದಿದ್ದಾರೋ ಇಲ್ಲವೋ, ಶರದ್‌ಪವಾರ್‌ರವರ ಹೆಸರು ಎಳೆದಿದ್ದಾರೋ ಇಲ್ಲವೋ ದಯಮಾಡಿ ತಾವು ಕಡತ ತರಿಸಿ ನೋಡಿ. ನಂತರ ರೂಲಿಂಗ್ ಕೊಡಿ. ಎರಡನೆಯದು ಎಲ್ಲಾ ಮಾಹಿತಿ ಇದೆ ಎಂದು ಹೇಳಿದ್ದಾರೆ ಬಹುಶಃ ಇಲ್ಲ. ನನಗೆ ಗೊತ್ತಿದೆ. ನಾನು ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಇನ್ನು ಒಂದು ದಿವಸ ಕಾಲಾವಕಾಶ ಕೊಡುತ್ತೇನೆ. ನಾವು ಇಲ್ಲಿ ಕುಳಿತು ಕೆಲಸ ಮಾಡಿದ್ದೇವೆ. ನೀವೂ ಸಹ ನಾಳೆ ಇಲ್ಲಿಗೆ ಬರಬಹುದು, ನಮ್ಮದು ಏನೂ ಶಾಶ್ವತ ಇಲ್ಲ. ಸಭಾ ನಡವಳಿಕೆ ಬಗ್ಗೆ ತಮಗೆ ಸಾಕಷ್ಟು ಅನುಭವ ಇದೆ. ನಾಳೆಯವರೆಗೂ ನಾವು ಕಾಲಾವಕಾಶ ಕೊಡುತ್ತೇವೆ. ನಾಳೆ ಸಾಯಂಕಾಲ ಸಭೆ ಅಂತ್ಯ ಆಗುತ್ತದೆ. ಒಂದು ವೇಳೆ ಮಾಹಿತಿಗಳನ್ನು ಮನೆಯಲ್ಲಿ ಬಿಟ್ಟು ಬಂದಿರಬಹುದು. ಇಲ್ಲಿ ತರದೇ ಇರಬಹುದು. ಎಲ್ಲಾ ಮಾಹಿತಿಗಳನ್ನು ನಾಳೆ ತರಲಿ, ದಯಮಾಡಿ ಪುನಃ ನಾಳೆ ವಿಷಯ ಪ್ರಸ್ತಾಪ ಮಾಡಲಿಕ್ಕೆ ಅವರಿಗೆ ಅವಕಾಶ ಕೊಡಿ. i.e., to present all facts and figures relating to this Rs. 270 crores estimate which has been now put to tender.

ಏನೇನು ಮಾಹಿತಿ ಬೇಕು ಟೆಂಡರ್ ನೋಟಿಫಿಕೇಷನ್‌ನಲ್ಲಿ ಯಾವತ್ತು ಟೆಂಡರ್ ಓಪನ್ ಮಾಡಬೇಕು, ಹೇಗೆ ಓಪನ್ ಮಾಡಬೇಕು ಇದೆಲ್ಲವೂ ಅದರಲ್ಲಿ ಇದೆ. ಅವತ್ತೇ ಓಪನ್ ಮಾಡಬೇಕೇ, ಅಥವಾ ಎಲ್ಲರನ್ನೂ ಕರೆಯಿಸಿ ನೋಟಿಸ್ ಕೊಟ್ಟು ಓಪನ್ ಮಾಡಬೇಕೋ ಈ ವಿಷಯ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಅವೆಲ್ಲವನ್ನೂ ಸಭೆಯ ಮುಂದೆ ಮಂಡನೆ ಮಾಡಲಿ, ನೀವು ಟೆಂಡರ್ ಬದಲಾಯಿಸಿ ಅದನ್ನು ಬೇರೆ ಯಾರಿಗೋ ಕೊಡುವುದಕ್ಕೆ ಹೊರಟಿದ್ದಾರೆ ಎಂಬ ಬಗ್ಗೆ ಅವರ ಹತ್ತಿರ ದಾಖಲೆಗಳಿದ್ದರೆ ಅದನ್ನು ದಯಮಾಡಿ ನೀವು ಸಭೆಯ ಮುಂದೆ ಇಡಲಿ, ಸುದೀರ್ಘವಾಗಿ ಚರ್ಚೆ ಆಗಲಿ, ಸಭೆ ತನ್ನ ಅಂತಿಮ ತೀರ್ಮಾನ ಆ ನಂತರ ಕೊಡಲಿ.

ಅವರು ಸಭೆಯ ಮುಂದೆ ಇಟ್ಟಂತಹ ಎಲ್ಲಾ ದಾಖಲಾತಿಗಳಿಗೆ ಸಭೆಯಲ್ಲಿ ಉತ್ತರ ಕೊಡಬೇಕಾದ ಜವಾಬ್ದಾರಿ ನಮಗೂ ಇದೆ. ನಾನು ಆ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಅವರ ಮುಂದೆ ಪ್ರಜಾವಾಣಿ ಪತ್ರಿಕೆ ಒಂದು ಇರಬಹುದು ಅಷ್ಟೆ. ಬಾಕಿ ಎಲ್ಲಾ ವಿಷಯ ಒದಗಿಸಿ ನಾಳೆ ಹೇಳಲಿ. Let him make any charges he wants particularly on this issue. ಒಂದು ಪ್ರಧಾನ ಮಂತ್ರಿಗಳ ಹೆಸರನ್ನು ಮತ್ತು ಶರದ್ ಪವಾರ್ ಹೆಸರನ್ನು ಕಡತದಿಂದ ದಯಮಾಡಿ ತೆಗೆದುಹಾಕಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, I am very sorry. ಈ ಚರ್ಚೆ ಎಲ್ಲಿಂದಲೋ ಹೋಗಿ ಯಾವುದೋ ದಿಕ್ಕನ್ನು ಪಡೆಯುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸಿಟ್ಟಿಗೆ ಎದ್ದರು. ನೀವು ಸಿಟ್ಟಿಗೇಳಬಾರದು, ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇದು ಏನಾಗಿದೆಯೆಂದರೆ ಪತ್ರಿಕೆಯಲ್ಲಿ ಬರೆದದ್ದನ್ನೆಲ್ಲಾ ನಂಬುವ ಹಾಗಿಲ್ಲ. ಅದನ್ನು ಆಧಾರವಾಗಿ ಇಟ್ಟುಕೊಂಡು ವ್ಯವಹಾರವನ್ನು ಮಾಡುವ

ಹಾಗೆ ಇಲ್ಲ ಎಂದು ರೂಲಿಂಗ್ಸ್ ಇದೆ. ಅದು ಬಹಳ ಹಿಂದಿನಿಂದಲೂ ಇದೆ. ಆದರೂ ಕೂಡ ಬಹುತೇಕವಾಗಿ ಲೋಕಸಭೆಯಲ್ಲಿ ಆಗಲಿ, ರಾಜ್ಯಸಭೆಯಲ್ಲಿಯಾಗಲಿ, ವಿಧಾನ ಸಭೆ, ವಿಧಾನ ಪರಿಷತ್ತಿನಲ್ಲಾಗಲಿ ಪತ್ರಿಕೆಯಲ್ಲಿ ಬಂದಂತಹ ಸುದ್ದಿಯನ್ನು ಆಧಾರವಾಗಿಟ್ಟುಕೊಂಡು ನಾವು ಚರ್ಚೆ ಆರಂಭ ಮಾಡುತ್ತೇವೆ. ಅದು ನಾಣಯ್ಯನವರಿಗೆ ಗೊತ್ತಿದೆ. ಶಾಸಕಾಂಗ ಎಷ್ಟು ಮುಖ್ಯವೋ, ಕಾರ್ಯಾಂಗ ಎಷ್ಟು ಮುಖ್ಯವೋ, ನ್ಯಾಯಾಂಗವೋ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ರಂಗ. ನನಗೆ ವಿಷಾದವಾಂತಹ ಒಂದು ಸಂಗತಿ ಏನೆಂದರೆ ಯಡಿಯೂರಪ್ಪನವರ ಬಾಯಲ್ಲಿ ಇಂಥದ್ದು ಬಂತು ಎಂದು ಅವರು ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದು ಅಥವಾ ತಿಳಿದುಕೊಂಡಿದ್ದು.....

ಅಧ್ಯಕ್ಷರು : ಸಾಮಾನ್ಯವಾಗಿ ಗೌಡರುಗಳಿಗೆ ಸಿಟ್ಟು ಬರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಪ್ರೊಸಿಂಡಿಂಗ್ಸ್ ನೋಡಿ, ನಾನು ಹೇಳಿಲ್ಲ. ನಾನು ಅಧ್ಯಕ್ಷರಿಗೆ ವಿನಂತಿ ಮಾಡಿದೆ; ತಾವು ದಯಮಾಡಿ ಈಗಲೇ ರೂಲಿಂಗ್ ಕೊಡಬೇಡಿ, ಪ್ರೊಸಿಡಿಂಗ್ಸ್ ತರಿಸಿ, ನೋಡಿ, ಅದರಲ್ಲಿ ಸತ್ಯಾಂಶ ಇದ್ದರೆ ನೀವು ನಿರ್ಣಯ ಮಾಡಿ ಎಂದು ಹೇಳಿದ್ದೇನೆ. ನಾನು ಅಷ್ಟು ದುಡುಕಿ ಮಾತನಾಡಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಇಲ್ಲಿ ಎರಡು ಸಂಗತಿಗಳಿವೆ. ಒಂದು ಇವರು ನಮ್ಮ ಹತ್ತಿರ ದಾಖಲಾತಿ ಇದೆ ಎಂದು ಹೇಳಿದರು. ಅವರು ಯಾವುದು ಹೇಳಿದರು ಎಂಬುದನ್ನು ಹೇಳುತ್ತೇನೆ. ಏತಕ್ಕೆಂದರೆ ನಾವು ಈ ಸಭೆಗೆ ಬರಬೇಕಾದರೆ ಚರ್ಚೆ ಮಾಡಿಕೊಂಡು ಬರುತ್ತೇವೆ. ಎರಡು ಸಂಗತಿಗಳು ಪತ್ರಿಕೆಯಲ್ಲಿ ಬಂತು. ಏನು ಬಂತು? ಎಲ್ಲೋ ಸಂತೆಯಲ್ಲಿ ಚರ್ಚೆ ಮಾಡಿದರೂ ಎಂದರೆ ನಾವು ಇಲ್ಲಿ ಎತ್ತುವ ಪ್ರಮೇಯ ಬರುತ್ತಿರಲಿಲ್ಲ. ಆಳುವ ಪಕ್ಷದ ಶಾಸಕಾಂಗ ಸಭೆ ನಡೆದಿದೆ. ಆ ಸಭೆಯಲ್ಲಿ ಈ ವಿಚಾರ ಚರ್ಚೆ, ಆ ಸಭೆಯಲ್ಲಿ ಇದ್ದಂತಹ ಅವರ ಸನ್ಮಾನ್ಯ ಸದಸ್ಯರು, ಈ ವಿಚಾರ ಪ್ರಸ್ತಾಪ ಮಾಡಿದ್ದಾರೆ ಎಂದು ಇವರು ಹೇಳಿದ್ದುದು ಆ ಅರ್ಥದಲ್ಲಿ. ಎಲ್ಲಿ ಪ್ರಧಾನ ಮಂತ್ರಿಯವರು ಕಡೆಗೆ ಮಹಾರಾಷ್ಟ್ರ ಮುಖ್ಯಮಂತ್ರಿಯವರ ಕಡೆಗೆ ಕೊಟ್ಟಿದ್ದಾರೆ ಎಂದು ಹೇಳಿ ಅವರ ಸಭೆಯಲ್ಲಿ ಪ್ರಸ್ತಾಪ ಆಯಿತು ಎಂದು ಪತ್ರಿಕೆಯಲ್ಲಿ ಬಂದಿದೆ; ಇದು ಸರಿಯಲ್ಲ ಎಂದು ಹೇಳಿದರು. ಅದು ಸರಿ ಎನ್ನತಕ್ಕಂಥಾದ್ದು ಹೇಳಲಿಲ್ಲ ಒಂದು. ಎರಡನೆಯದು ಅವರು ಎಸ್ಟಿಮೇಟ್ ವಿಚಾರಕ್ಕೆ ಮಾಹಿತಿ ಇದೆ ಎಂದು ಹೇಳಿದ್ದುದು. ಈಗ ತಮಗೆ ಪಿಡಬ್ಲ್ಯೂಡಿ ವಿಚಾರ ಗೊತ್ತಿದೆ. ನಾವು ಫಿಗರ್ಸ್‌ನ್ನು ಇನ್‌ಫ್ಲೇಟೆಡ್ ಎಸ್ಟೀಮೇಟ್ ಮಾಡುವುದಕ್ಕೆ ಆಗುವುದಿಲ್ಲವೇ? ಎಸ್ಟಿಮೇಟ್ಸ್‌ನ್ನು 40-50 ಕೋಟಿ ಇನ್‌ಫ್ಲೇಟ್ ಮಾಡುವುದಕ್ಕೆ ಆಗುವುದಿಲ್ಲವೇ?

SRI H.D. DEVE GOWDA : I am able to understand.

SRI R.L. JALAPPA : You have got a very big lawyer pleading for a worst case.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಒಂದು ವಿಚಾರವನ್ನು ಹೇಳುತ್ತೇನೆ, ಈ ಸಭೆಯಲ್ಲಿ ಎಲ್ಲರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಅದು ನಿಜ. ಅದು ವಿರೋಧ ಪಕ್ಷದದ ನಾಯಕರು ಇರಬಹುದು, ಮುಖ್ಯಮಂತ್ರಿಗಳು ಇರಬಹುದು, ನಂಜೇಗೌಡ ಇರಬಹುದು. ಯಾರೇ ಇರಬಹುದು. ಆದರೆ ಇದು ಏನಾಗುತ್ತದೆಂದರೆ ಖಾರವಾಗಿ ಮಾತನಾಡುವುದಕ್ಕೆ ಹೋದಾಗ ಹೇಳಿದ್ದುದು ಸರಿಯಾಗಿ ಅರ್ಥವಾಗುವುದಿಲ್ಲ. ಅವರು ಹೇಳಿದ್ದು ಎಸ್ಟಿಮೇಟ್‌ನ ಇನ್‌ಫ್ಲೇಟ್ ಮಾಡಿದ್ದಕ್ಕೆ ದಾಖಲಾತಿ ಎಂದು.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಸೇರಿದಂತೆ ನೀವು ನಿಮ್ಮ ಪಕ್ಷದ ಲಾಯಲ್ಟಿ, ನಿಮ್ಮ ನಾಯಕರ ಲಾಯಲ್ಟಿ ಬಗ್ಗೆ ನಾನು ಪ್ರಶ್ನೆ ಮಾಡಿಯೇ ಇಲ್ಲ. ನೀವು ರಿಫೆಂಡ್ ಮಾಡಿ. ದಯಮಾಡಿ ನೀವು ಪ್ರೊಸೀಡಿಂಗ್ಸ್ ತರಿಸಿಕೊಂಡು ಓದಿ. ನಾನು ಮತ್ತೆ ಡಿಬೇಟ್ ಮಾಡುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು : ಬಹುಶಃ ನಿಮಗೆ ಮಾತನಾಡಿಕೊಳ್ಳುವುದಕ್ಕೆ ಟೈಂ ಕಡಿಮೆ ಇತ್ತು ಎಂದು ಕಾಣುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ವಿನಂತಿ ಮಾಡಿಕೊಳ್ಳುವುದಕ್ಕೆ ಹೊರಟಿ ಎಂಬುದನ್ನು ಹೇಳುತ್ತೇನೆ. ನೀವು ಸರ್ಕಾರದವರು ತಕ್ಷಣ ಉತ್ತರ ಕೊಡಬೇಕು ಎಂದು ಏನಿಲ್ಲ. ಈ ಶೂನ್ಯ ವೇಳೆಯಲ್ಲಿ ಬಂದಂತಹ ವಿಚಾರಗಳಿಗೆ ಲೋಕಸಭೆಯಲ್ಲಿ, ಬೋಫರ್ಸ್ ವಿಚಾರ ಬೆಳಿಗ್ಗೆ ಎತ್ತಿ ಗಲಾಟೆಯಾದಾಗ ಅದಕ್ಕೆ ಸಾಯಂಕಾಲ ಉತ್ತರ ಕೊಟ್ಟರು. ಆ ಎಸ್ಟಿಮೇಟ್ ತರಿಸಿ ಇಡಿ. ಇನ್‌ಫ್ಲೇಟೆ ಹೇಗೆ ಮಾಡಿದ್ದಾರೆ ಎಂದು ನಾನೇ ಹೇಳುತ್ತೇನೆ. ಅವರಿಗೇ ಗೊತ್ತಾಗುತ್ತದೆ. ಟೆಂಡರ್ ಹಾಕುವವರು ಅದನ್ನು ನೋಡಿಕೊಂಡೇ ಕಡಿಮೆ ಹಾಕಿರುತ್ತಾರೆ ಅಥವಾ ಜಾಸ್ತಿ ಹಾಕಿರುತ್ತಾರೆ. ಅದು ಪ್ರಶ್ನೆ ಬೇರೆ. ಅವರು ಹೇಳಿದ್ದುದು ಬೇರೆ ಅರ್ಥದಲ್ಲಿ. ಇದನ್ನು ಸುಮ್ಮನೆ ಅನಗತ್ಯವಾಗಿ ಅಪಾರ್ಥ ಕಲ್ಪಿಸಿಕೊಂಡು ಬೆಳೆಸಿಕೊಂಡು ಮನಸ್ಸನ್ನು ಖಾರ ಮಾಡಿಕೊಳ್ಳುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಮಾನ್ಯ ಯಡಿಯೂರಪ್ಪನವರು ಏನು ಪ್ರಸ್ತಾಪ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದದ್ದನ್ನು ಪ್ರಸ್ತಾಪ ಮಾಡಬಾರದೆಂದು ಯಾರೂ ಹೇಳಿಲ್ಲ. ಏಕೆಂದರೆ ಅನೇಕ ಸಲ ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಕಡೆ ಇದ್ದಾಗ ಪತ್ರಿಕೆಯನ್ನು ನೋಡೇ ಹೇಳಿದ್ದರು. ಈಗ ವಿಷಯವೆನೆಂದರೆ ಮುಖ್ಯಮಂತ್ರಿಗಳ ಹೆಸರು ಮತ್ತು ಪ್ರಧಾನ ಮಂತ್ರಿಗಳ ಹೆಸರನ್ನು ಇದರಲ್ಲಿ ತೆಗೆದುಕೊಂಡು ಇವತ್ತು ಹೇಳುತ್ತಿದ್ದಾರೆ. ಅದಕ್ಕಾಗಿ.....

ಅಧ್ಯಕ್ಷರು : ಈ ವಿಷಯ ಬೇಡ. ನಂಜೇಗೌಡರು ಅದರ ಬಗ್ಗೆ ಕ್ಲಾರಿಫೈ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಸಭೆಯಲ್ಲಿ ಮಾತನಾಡಿದರು ಎನ್ನುವ ಬಗ್ಗೆ ರುಜುವಾತು ಬೇಡವೇ, ಅವರೇನಾದರೂ ಮಗ, ಮೊಮ್ಮಗ ಎನ್ನುವ ಬಗ್ಗೆ ಯಾರಾದರೂ ಬೇಕಲ್ಲಾ, ಸುಮ್ಮನೆ ಅವರು ಹೇಳಿದರು ಎಂದು ನೀವು ಬಂದು ಹೇಳಲು ಆಗುತ್ತದೆಯೆ? ನೀವು ಜವಾಬ್ದಾರಿ ಸ್ಥಾನದಲ್ಲಿದ್ದೀರಿ, ಅದನ್ನು ನೀವು ತಿಳಿದುಕೊಂಡೇ ಹೇಳಬೇಕಾಗುತ್ತದೆ. ಯಾರೋ ಹೇಳಿದರು ಎಂದು ಇಲ್ಲಿ ಪ್ರಸ್ತಾಪ ಮಾಡಬಹುದೇ? ನಮಗೂ ಕೂಡ ಅನೇಕ ವಿಚಾರಗಳು ಗೊತ್ತಿರುತ್ತದೆ. ಅವರು ಹೇಳಿದರು ಎಂದು ನಾನು ಹೇಳುವಾಗ ಅದನ್ನು ರುಜುವಾತುಪಡಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಯನ್ನು ತೆಗೆದು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಲ್ಡ್ ಆಗಿಲ್ಲ. I have not yielded. Mr. Yediyurappa, I have yielded.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡಬೇಕಾದರೆ ನಾನು ಈಲ್ಡ್ ಆಗದೆಯೇ ನೀವು ಮಾತನಾಡಿದಿರಿ. ಮೊದಲು ನೀವು ಕಲಿಯಿರಿ. ಅನಂತರ ನಾನು

ವಿರೋಧ ಪಕ್ಷದ ನಾಯಕನಾಗಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಕಲಿತುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನನ್ನ ಕಳಕಳಿಯ ಮನವಿ ಏನೆಂದರೆ, ಈಗ ಏನು ಪ್ರೊಸೀಡಿಂಗ್ಸ್‌ನಲ್ಲಿ ಬಂದಿದೆ ಇದನ್ನು ದಯವಿಟ್ಟು ತೆಗೆದುಹಾಕಿ.

ಅಧ್ಯಕ್ಷರು : ಆಗಲಿ, ನಾನು ಕಡತವನ್ನು ತರಿಸಿ ನೋಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಶಬ್ದವನ್ನೂ ತೆಗೆದುಹಾಕಬಾರದು. ಒಂದು ಶಬ್ದವನ್ನು ತೆಗೆಯತಕ್ಕ ಅಗತ್ಯವಿಲ್ಲ. ನಾನು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ನಿಮಗೆ ಅಧಿಕಾರವಿದೆ ನೀವು ಕಡತವನ್ನು ತರಿಸಿ ನೋಡಿ. ನೀವು ಯಾವ ರೀತಿ ತೀರ್ಪನ್ನು ಕೊಡುತ್ತೀರೋ ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ ನಾನು ಏನು ಮಾತನಾಡಿದ್ದೇನೆ ಅದನ್ನು ಜವಾಬ್ದಾರಿಯುತವಾಗಿ ಮಾತನಾಡಿದ್ದೇನೆ. ತಾವು ಕಡತವನ್ನು ತೆಗೆದುನೋಡಿ. ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಟೆಂಡರ್ ಎಸ್ಟಿಮೇಟ್ ಮಾಡತಕ್ಕ ಸಮಯದಲ್ಲಿ 40-50 ಕೋಟಿ ಜಾಸ್ತಿ ಮಾಡಿ ಇಲ್ಲಿ ಮೋಸ ಮಾಡತಕ್ಕ ವ್ಯವಹಾರ ನಡೆದಿದೆ ಎನ್ನತಕ್ಕ ಸಂಶಯ ನಮಗೆ ಬಂದಿದೆ. ಈ ಟೆಂಡರ್‌ನ್ನು ರದ್ದು ಮಾಡಿ ಹೊಸದಾಗಿ ಎಸ್ಟಿಮೇಟ್ಸ್‌ನ್ನು ಮಾಡಿಸಿ, ಹೊಸದಾಗಿ ಟೆಂಡರ್‌ನ್ನು ಕರೆಯಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಅದೇ ರೀತಿ ಚುನಾವಣೆ ಘೋಷಣೆ ಆದ ಮೇಲೆ ಯಾವ್ಯಾವ ಕಾಮಗಾರಿಗಳಿಗೆ ಗುತ್ತಿಗೆಯನ್ನು ಕೊಟ್ಟಿದ್ದೀರೋ ಅವೆಲ್ಲವನ್ನೂ ರದ್ದು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇವೆ. ಇದಕ್ಕೆ ತಾವು ಏನು ಮಾಡುತ್ತೀರೆಂದು ನೇರವಾಗಿ ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಅವರು ಎರಡು ಬೇಡಿಕೆಗಳನ್ನು ಇಟ್ಟಿದ್ದಾರೆ. ತಮಗೆ ಅತ್ಯಂತ ಗೌರವದಿಂದ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಪ್ರತಿಪಕ್ಷದ ನಾಯಕರೆಂದು ಹೇಳಿದರೆ, ನಮ್ಮ ವ್ಯವಸ್ಥೆಯಲ್ಲಿ you enjoy the status a Chief Minister in case this Government is voted out from the Office.

ನೀವು ಸರ್ಕಾರವನ್ನು ರಚನೆ ಮಾಡತಕ್ಕ ಸ್ಥಾನದಲ್ಲಿ ಇದ್ದೀರಿ. ಇದು ನಮ್ಮ ವ್ಯವಸ್ಥೆಯಲ್ಲಿದೆ. ನಾನು ಒಂದೇ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ತಾವು ಇಲ್ಲಿ ಸಾಕಷ್ಟು ಮಾಹಿತಿಯನ್ನು ಸಂಗ್ರಹ ಮಾಡಿಕೊಳ್ಳಿ. ಆದರೆ ಒಂದು ಮಾತ್ರ ಹೇಳಬೇಕಾಗುತ್ತದೆ, ಈ ಸರ್ಕಾರ ತಾನು ಒಂದು ನಿರ್ಣಯವನ್ನು ಘೋಷಣೆ ಮಾಡಿದಾಗ ನಾವು ಯಾರ ಒತ್ತಾಯದಿಂದಲೂ ಮಾಡಲಿಲ್ಲ. ಚುನಾವಣಾ ಕಮೀಷನ್‌ರವರು ಏನು ಯಾವ ದಿನ ಚುನಾವಣೆಯನ್ನು ನಡೆಸುತ್ತೇವೆಂದು ಹೇಳಿದರೋ ಅಲ್ಲಿಂದ ಹಿಂದಿನ ಸರ್ಕಾರ ರಾಜೀನಾಮೆ ಕೊಡುವವರೆಗೆ ತೆಗೆದುಕೊಂಡ ನಿರ್ಣಯವನ್ನು ನಾವು ಪುನಃ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕ ಮಾತನ್ನು ನಾವು ಅಧಿಕಾರಕ್ಕೆ ಮೊದಲು ಹೇಳಿದ್ದೇನೆ. ನಾವು ಅಧಿಕಾರಕ್ಕೆ ಬರುತ್ತೇವೆ ಎನ್ನತಕ್ಕ ಕನಸು ನಮಗೆ ಇರಲಿಲ್ಲ. ಆದರೆ ಒಂದು ವೇಳೆ ನಮ್ಮ ಸರ್ಕಾರ ಬಂದರೆ We are going to review all the decisions made during that period.

ಈ ಮಾತನ್ನು ನಾನು ಹೇಳಿದ್ದೇನೆ. ನಾವು ಅಧಿಕಾರಕ್ಕೆ ಬರುತ್ತೇವೆ ಎನ್ನತಕ್ಕದ್ದು ನಮ್ಮ ಕೈಯಲ್ಲಿ ಇರಲಿಲ್ಲ, ಜನರು ಅದನ್ನು ತೀರ್ಮಾನ ಮಾಡಬೇಕಾಗಿತ್ತು. ಈ ಮಾತನ್ನು ಸ್ವಯಂ ಪ್ರೇರಣೆಯಿಂದ ಹೇಳಿದ್ದೇನೆ. ಅದೇ ರೀತಿ ಅಧಿಕಾರಕ್ಕೆ ಬಂದ ಮೇಲೆ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ಮಾಡಿದ್ದೇವೆ ಮತ್ತು ಆಯಾಯ ಇಲಾಖೆಗೆ ಸೂಚನೆ ಕೊಟ್ಟಿದ್ದೇವೆ ಈ ಒಂದು ತಿಂಗಳು ತೀರ್ಮಾನವನ್ನು ಪುನರ್‌ಪರಿಶೀಲಿಸಿ ಎಂದು. ಇದರಲ್ಲಿ ಎಲ್ಲಾದರೂ ತಪ್ಪು ನಡವಳಿಕೆಯಾಗಿದ್ದರೆ ಅದರ

ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಇಲಾಖೆಯವರನ್ನು ತಂದು ಈ ಟೇಬಲ್ ಮೇಲೆ ಇರಲಿಕ್ಕೆ ಆಗುವುದಿಲ್ಲ.

ಎಸ್ಟಿಮೇಟ್ ಇನ್‌ಫ್ಲೇಟ್ ಆಗಿದೆ ಎಂದು ಹೇಳುವುದಕ್ಕೆ ನಾನು ತಜ್ಞ ಅಲ್ಲ ನೀವು ಏನೂ ತಜ್ಞರಲ್ಲ. There is a procedure. ಯಾವುದೇ ಎಸ್ಟಿಮೇಟನ್ನು ಸ್ಕೃಟಿನಿ ಮಾಡುವಾಗ Before we give technical sanction to an estimate, there is a Technical Committee which is empowered to scrutinise the estimates.

ಇದರ ಬಗ್ಗೆ ನಾನು ಇಲ್ಲಿ ಚರ್ಚೆಗೆ ಬರುವುದಿಲ್ಲ. ಆದರೆ ಈ ಹಣ ದುರುಪಯೋಗವಾಗಿದೆ ಎಂದರೆ ಈ ಸದನದ ಒಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದೆ. ಅದನ್ನು ಇನ್‌ಫ್ಲೇಟ್ ಮಾಡಿದ್ದಾರೋ, ಹೆಚ್ಚು ದುರುಪಯೋಗ ಮಾಡಿದ್ದಾರೋ, ಏನು ಮಾಡಿದ್ದಾರೋ ಎಂದು ನೋಡಲಿಕ್ಕೆ ನೀವೆಲ್ಲರೂ ಹಿರಿಯ ಸದಸ್ಯರುಗಳಿದ್ದೀರಿ. ಬಹುಶಃ ಪಿ.ಎ.ಸಿ. ಛೇರ್‌ಮನ್‌ಷಿಪ್ ಅಪ್ಪೋಷಿಷನ್‌ಗೆ ಹೇಗೂ ಹೋಗುತ್ತದೆ. ನೀವು ತರಿಸಿಕೊಳ್ಳಿ. Call those Engineers, hammer them. That is a Forum. This House cannot it here.

ಇಲ್ಲಿ ರೇಟ್‌ಇನ್‌ಫ್ಲೇಟ್ ಆಗಿದೆ ಎಂದು ಹೇಳುವುದಕ್ಕೆ ಈ ಸದನ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. Nobody can do that now. We have got is better job to do it. There is a Legislature Committee which is going to function as a Mini-Legislature. You summon those Officers. Take decisions based on the evidence given by the officers in that committee and submit a report to this House. I am not going to suppress any information. If the Committee wants, I will direct the Officers to produce any document

ಇದಕ್ಕಿಂಥ ಇದರ ಬಗ್ಗೆ ಮತ್ತು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ನಾನು ಮೊದಲೇ ಹೇಳಿದ್ದೇನೆ. ನಿಮ್ಮಲ್ಲಿ ದಾಖಲಾತಿಗಳು ಇದ್ದರೆ ನಾನು ಚರ್ಚೆಗೆ ಸಿದ್ಧನಾಗಿದ್ದೇನೆ. ನಾಳೆ ಮತ್ತೆ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲ ಎಂದರೆ ನಾನು ಏನು ವಿವರಣೆ ಕೊಟ್ಟಿದ್ದೇನೆ. ಬಹುಶಃ ಸಭೆಯ ಒಂದು ವಿಶ್ವಾಸಕ್ಕೆ ತೆಗೆದುಕೊಂಡು ಈ ಒಂದು ನಿರ್ಣಯವನ್ನು ಕೊಟ್ಟಿದ್ದೇನೆ. ಇದಕ್ಕಿಂತ ಮತ್ತೆ ನಾನು ಏನೂ ಸರ್ಕಾರದ ವತಿಯಿಂದ ಹೇಳುವುದಕ್ಕೆ ಸಿದ್ಧನಿಲ್ಲ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ, ತಾವು ಯಾವುದೇ ಸಂದರ್ಭದಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದು ಇದ್ದರೆ, The Government is ready and on behalf of the Government, I am prepared to answer. I sought your permission; please permit me to go out of the House.

(INTERRUPTIONS)

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕೋಪಯೋಗಿ ಇಲಾಖೆಯ ಟೆಂಡರ್‌ನ್ನು 26ನೇ ತಾರೀಖು ಓಪನ್ ಆದ ಮೇಲೆ ಇದನ್ನು ರದ್ದು ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಸಭಾನಾಯಕರು ಹೇಳಿಲ್ಲ. ಈ ಒಂದು ದೊಡ್ಡ ಅವ್ಯವಹಾರ ನಡೆಯುತ್ತಿದೆ. ಅದಕ್ಕೆ ಪರೋಕ್ಷವಾಗಿ ಬೆಂಬಲ ಕೊಡುವಂತಹ ಮಾತು ಇದು ಆಗಬಹುದು ಎಂದು ನಮಗೆ ಅನುಮಾನ ಬರುತ್ತದೆ. ಇವತ್ತು ಈ ಒಂದು ಟೆಂಡರ್‌ನ್ನು ರದ್ದು ಮಾಡಿ ಹೊಸದಾಗಿ ಎಸ್ಟಿಮೇಟ್ ಮಾಡಿ ಈ ಕೆಲಸವನ್ನು ಪ್ರಾರಂಭ ಮಾಡಬೇಕು ಎಂಬ ಒತ್ತಾಯ ನನಗೆ ಇತ್ತು. ಸಭಾನಾಯಕರು ಇದಕ್ಕೆ ಒಪ್ಪಲಿಲ್ಲ. ಇವತ್ತು ಏನು ಅವ್ಯವಹಾರಗಳು ನಡೆಯುತ್ತಿವೆ ಅದಕ್ಕೆ ಪರೋಕ್ಷವಾಗಿ